ಸಭೆ, ಸಮಾರಂಭ, ಜಾತ್ರೋತ್ಸವ, ನೇಮೋತ್ಸವ, ಮದುವೆ ಹಾಗೂ ಇನ್ನಿತರ ಕಾರ್ಯಕ್ರಮಗಳ
ನೇರಪ್ರಸಾರ
ಮಾಡಲು ನಮ್ಮನ್ನು ಸಂಪರ್ಕಿಸಿ
ಮೊ: 9449387044, 9481741055
9980344970, 9164625996

ಅಮರ ಸುಳ್ಯ ಸುದ್ದಿ

AMARA SULLIA SUDDHI

ಸುಳ್ಯದ ಜನಪರ ಕನ್ನಡ ವಾರಪತ್ರಿಕೆ

Regd.No.PTR/126/2022-24
Licenced to Post under WPP
No. SK/WPP/PTR/156/2022-24

AYURDHAMA Ayurveda
ಆಯುರ್ಧಾಮ ಆಯುರ್ವೇದ ಆಸ್ಪತ್ರೆ
ಹಳೆಗೇಟು, ಸುಳ್ಯ
ಮೊ: 8861924423 www.ayurdhama.com
ಮಕ್ಕಳ ಬೆಳವಣಿಗೆ ಸಮಸ್ಯೆ, ಬಂಜೆತನ, ಪಿತ್ತಕೋಶದ ಕಲ್ಲು, ಮೂತ್ರದ ಕಲ್ಲು, ಸಕ್ಕರೆ ಕಾಯಿಲೆ, ಹರ್ನಿಯಾ, ಮೂಲವ್ಯಾಧಿ (ಪೈಲ್ಸ್) ಭಗಂದರ ಫಿಶರ್ (ಪಿಸ್ಟುಲಾ)
ಡಾ. ಹರಿಪ್ರಸಾದ್ ಶೆಟ್ಟಿಯಂ ಆಡಳಿತ ನಿರ್ದೇಶಕರು ಮೊ : 9880464302
ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸುವ ಸ್ವರ್ಣ ಪ್ರಾಶನ ಲಭ್ಯವಿದೆ.
ಡಾ. ಸುಕೇಶ್ ತಜ್ಞ ಚಿಕಿತ್ಸಕರು

ಪ್ರಧಾನ ಸಂಪಾದಕರು : ಮುರಳೀಧರ ಅಡ್ಡನಪಾರೆ Email: amarasuddi@gmail.com Website : www.amarasuddi.com
Mob : 9449387044, Off. : 7338248044
Facebook : Amarasullia Suddi

RNI No. KAR KAN / 2012 / 49234 | ಸಂಪುಟ –13 | ಸಂಚಿಕೆ – 04 | 2024 ಫೆ.16ರಿಂದ ಫೆ.22ರವರೆಗೆ | Posted at SULLIA M.D.G. ON 16.02.2024 | ಪುಟ–6 | ಬೆಲೆ: ರೂ. 4.00

ಕೊಲ್ಲಮೊಗ್ರು: ಪತ್ರಕರ್ತರ ಗ್ರಾಮ ವಾಸ್ತವ್ಯದಲ್ಲಿ ಗ್ರಾಮಸ್ಥರಿಂದ ಅಹವಾಲು ಸಲ್ಲಿಕೆ

ಕಂದಾಯ- 'ಅರಣ್ಯ ಸಮಸ್ಯೆ ಪರಿಹಾರಕ್ಕೆ ಪೈಲಟ್ ಯೋಜನೆ'

ಕೊಲ್ಲಮೊಗ್ರು ಮತ್ತು ಹರಿಹರ ಪಲ್ಲತ್ತಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ, ಭಾಗಶಃ ಅರಣ್ಯ ಸಮಸ್ಯೆ ಸೇರಿ ಅರಣ್ಯ – ಕಂದಾಯ ನಡುವಿನ ಸಮಸ್ಯೆ ಇದೆ. ಇದರ ಪರಿಹಾರಕ್ಕೆ ಇಲ್ಲಿ ಪೈಲಟ್ ಯೋಜನೆಯಡಿಯಲ್ಲಿ ಸರ್ವೆ ಮಾಡಿಸಿ ಇಲ್ಲಿನ ಅರಣ್ಯ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತೇವೆ. 3–4 ತಿಂಗಳ ಯೋಜನೆ ಅಡಿಯಲ್ಲಿ ಸರ್ವೆ ಪೂರ್ತಿ ಮಾಡಲಾಗುವುದು. ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಸುಳ್ಯ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಸುಬ್ರಹ್ಮಣ್ಯ ಪ್ರೆಸ್ ಕ್ಲಬ್, ದಕ್ಷಿಣ ಕನ್ನಡ ಜಿಲ್ಲಾಡಳಿತ, ಪೊಲೀಸ್ ಇಲಾಖೆ ತಾಲೂಕು ಆಡಳಿತ, ಸ್ಥಳೀಯಾಡಳಿತ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ವತಿಯಿಂದ ಕೊಲ್ಲಮೊಗ್ರು ಬಂಗ್ಲೆಗುಡ್ಡೆ ಶಾಲಾ ವಠಾರದಲ್ಲಿ ನಡೆದ ಪತ್ರಕರ್ತರ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಅಧಿಕಾರಿಗಳು, ಜನಪ್ರತಿನಿಧಿಗಳ ಜೊತೆ ಗ್ರಾಮಸ್ಥರಿಂದ ಸಂವಾದ ಕಾರ್ಯಕ್ರಮದಲ್ಲಿ ಅವರು ಅಹವಾಲು ಆಲಿಸಿ ಮಾತನಾಡಿದರು.

ಪೈಲಟ್ ಯೋಜನೆಯಡಿ ಇಲ್ಲಿನ ಭಾಗಷಃ ಅರಣ್ಯ ಸಮಸ್ಯೆ ಪರಿಹರಿಸಲಾಗುವುದು. ಬಳಿಕ ಇಲ್ಲಿನ ಇತರೆ ಸಮಸ್ಯೆಗಳ ಪರಿಹಾರಕ್ಕೂ ಇದು ಪೂರಕವಾಗಲಿದೆ ಎಂದರು.

ಗುಳಿಕಾನ ಸಂತ್ರಸ್ತರಿಗೆ ಕೂಡಲೇ ನಿವೇಶನ ನೀಡಿ; ಕಲ್ಮಕಾರು ಗ್ರಾಮದ ಗುಳಿಕಾನದಲ್ಲಿ 9 ಕುಟುಂಬಗಳಿಗೆ ಪ್ರಾಕೃತಿಕ ವಿಕೋಪದಿಂದ ವಾಸಕ್ಕೆ ಬದಲಿ ನಿವೇಶನ ಗುರುತಿಸಲು ತಿಳಿಸಲಾಗಿದ್ದರೂ ಇನ್ನೂ ನಿವೇಶನ ನೀಡಿಲ್ಲ ಎಂದು ಪ್ರಸ್ತಾಪಿಸಲಾಯಿತು. ಜಿಲ್ಲಾಧಿಕಾರಿ ಅವರು ಈ ಬಗ್ಗೆ ತಹಶಿಲ್ದಾರ್, ಅರಣ್ಯ ಇಲಾಖೆ ಅಧಿಕಾರಿ, ಸರ್ವೆ ಅಧಿಕಾರಿಗಳಿಂದ ಮಾಹಿತಿ ಪಡೆದು, ಇಲ್ಲಿನ ಸಮಸ್ಯೆಗೆ ಎರಡು ದಿನದಲ್ಲಿ ಬಗಹರಿಸುವಂತೆ ಸೂಚಿಸಿ ಸಲಹೆಗಳನ್ನು ನೀಡಿದರು.

ರಜಾ ದಿನಗಳಲ್ಲಿ ಬಸ್ ಸೇವೆ ಲಭ್ಯ ಇಲ್ಲ, ಕೆಲವೆಡೆ ಬಸ್ ಸಂಚಾರ ಕಡಿತ ಮಾಡಿರುವ ಬಗ್ಗೆ ಗ್ರಾಮಸ್ಥರು ಪ್ರಸ್ತಾಪಿಸಿದರು. ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಮಾತನಾಡಿ, ಬಸ್ ಸೇವೆಯನ್ನು ಜನರ ಸಮಯಕ್ಕೆ ಸರಿಯಾಗಿ ವೇಳಾಪಟ್ಟಿ ತಯಾರಿಸುವಂತೆ, ರಜಾ ದಿನಗಳಲ್ಲೂ ಬಸ್ ಸೇವೆ ನೀಡುವಂತೆ ನಿರ್ದೇಶನ ನೀಡಿದರು. ಕೋವಿ ಡೆಪಾಸಿಟ್, ವರ್ಗಾವಣೆ, ಲೈಸೆನ್ಸ್ ಮುಂತಾದ ವಿಷಯದಲ್ಲಿ ಸರಳೀಕರಣ ಮಾಡಲು ಪ್ರಯತ್ನ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು. ಪ್ರಾಕೃತಿಕ ವಿಕೋಪದಿಂದ ಇಲ್ಲಿನ ಸೇತುವೆ, ರಸ್ತೆಗಳು ಹಾನಿಗೊಂಡಿದ್ದು ತಾತ್ಕಾಲಿಕ ದುರಸ್ತಿ ಮಾತ್ರವೇ ನಡೆದಿದೆ ಎಂಬುದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿ, ನೆರೆ ಹಾನಿ ಪರಿಹಾರ ಕಾಮಗಾರಿಗಳಿಗಾಗಿ ಈಗಾಗಲೇ ಅನುದಾನಕ್ಕೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇಲ್ಲಿನ ಬೇಡಿಕೆಯನ್ನೂ ಸೇರಿಸಲಾಗುವುದು. ಶಾಶ್ವತ ಪರಿಹಾರಕ್ಕೆ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು. ಗ್ರಾಮ ಲೆಕ್ಕಾಧಿಕಾರಿಗಳ ಕೊರತೆ ಬಗ್ಗೆ ಕೇಳಿದಾಗ ಜಿಲ್ಲೆಯಲ್ಲಿ 98 ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳು ಖಾಲಿ ಇದೆ. ಈಗಾಗಲೇ 50 ಹುದ್ದೆಗಳ ನೇಮಕಕ್ಕೆ ಪ್ರಕ್ರಿಯೆ ನಡೆಯುತ್ತಿದೆ. ಆ ವೇಳೆ ಹೆಚ್ಚಿನ ಹುದ್ದೆಗಳು ಭರ್ತಿಯಾಗಲಿದೆ. ಆ ಸಂದರ್ಭದಲ್ಲಿ ಇಲ್ಲಿಗೂ ವಿಎ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಗಾಳಿಬೀಡು ರಸ್ತೆಗೆ ಕಾನೂನಿನಂತೆ ಪ್ರಯತ್ನ; ಸುಬ್ರಹ್ಮಣ್ಯ–ಕಡಮಕಲ್ಲು–ಗಾಳಿಬೀಡು ರಸ್ತೆ ಸಂಪರ್ಕಕ್ಕೆ ಕಾನೂನಿನ ಅವಕಾಶಗಳನ್ನು ನೋಡಿಕೊಂಡು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಕೇಂದ್ರದಿಂದಲೂ ಅನುಮತಿ ಪಡೆದು ರಸ್ತೆ ಅಭಿವೃದ್ಧಿ ನಡೆಸಲು ಪ್ರಯತ್ನ ಮಾಡುವ ಭರವಸೆಯನ್ನು ಜಿಲ್ಲಾಧಿಕಾರಿ ನೀಡಿದರು. ಬಿ.ಎಸ್.ಎನ್.ಎಲ್. ನೆಟ್‌ವರ್ಕ್ ಸಮಸ್ಯೆ ಬಗ್ಗೆ ಗ್ರಾಮಸ್ಥರು ಪ್ರಸ್ತಾಪಿಸಿದರು. ಈ ಬಗ್ಗೆ ಸಮಸ್ಯೆ ಪರಿಹರಿಸಲು ಸೂಚನೆ ನೀಡುತ್ತೇನೆ ಎಂದು ಡಿಸಿ ತಿಳಿಸಿದರು. ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ ಈಗಾಗಲೇ ಬಾಳುಗೋಡಿನಲ್ಲಿ ಹೊಸ ಬಿ.ಎಸ್.ಎನ್.ಎಲ್. ಟವರ್ ನಿರ್ಮಾಣ ಕೆಲಸ ಆರಂಭಗೊಂಡಿದೆ ಎಂದರು.

ಖಾಸಗಿಯವರು ಮುಂದೆ ಬಂದಲ್ಲಿ ಟೂರಿಸಂ ಅಭಿವೃದ್ಧಿ ಸಾಧ್ಯ; ಇಲ್ಲಿನ ಇಕೋ ಟೂರಿಸಂ ಅಭಿವೃದ್ಧಿಗೆ ಸರಕಾರದ ಜೊತೆ ಖಾಸಗಿಯವರ ಸಹಕಾರವೂ ಅಗತ್ಯ. ಖಾಸಗಿಯವರು ಇಲ್ಲಿ ಟೂರಿಸಂಗೆ ಪೂರಕವಾಗಿ ಸ್ಪಂದಿಸಲು ಮುಂದೆ ಬಂದಲ್ಲಿ ಈ ಬಗ್ಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಟೂರಿಸಂ ಅಭಿವೃದ್ಧಿಗೆ ಪ್ರಯತ್ನ ನಡೆಸಲಾಗುವುದು ಎಂದರು. ಇದರಿಂದ ಇಲ್ಲಿನ ಸ್ಥಳೀಯ ಟೂರಿಸಂ ಸ್ಥಳಗಳ ಭೇಟಿಗೂ ಪ್ರಯೋಜನವಾಗಲಿದೆ ಎಂದು ತಿಳಿಸಿದರು.

ಅಡಿಕೆ ಬದಲಿಗೆ ಯಾವ ಕೃಷಿ ತಿಳಿಸಿ; ವಿಶೇಷ ಶಿಬಿರ: ಇಲ್ಲಿನ ಅಡಿಕೆ ಎಲೆಚುಕ್ಕಿ, ಹಳದಿ ಎಲೆ ರೋಗ ವ್ಯಾಪಕವಾಗಿರುವ ಬಗ್ಗೆ ಪ್ರಸ್ತಾಪಿಸಲಾಯಿತು. ಈ ಬಗ್ಗೆ ಕೃಷಿಕರು ಹಾಗೂ ಅಧಿಕಾರಿಗಳು ಚರ್ಚೆ ನಡೆಸಿದರು. (4ನೇ ಪುಟಕ್ಕೆ)

'ಸಾಂಸ್ಕೃತಿಕ ಸಂಗತಿಗಳು ಲೋಕಾನುಭವ ಹೆಚ್ಚಿಸುತ್ತವೆ'ರಂಗಮನೆ ರಂಗಸಂಭ್ರಮ ಸಮಾರೋಪದಲ್ಲಿ ಡಾ.ಬಿ.ಎ.ಕುಮಾರ ಹೆಗ್ಡೆ

ಸೋಶಿಯಲ್ ಮೀಡಿಯಾದ ಅತಿ ಬಳಕೆ ಮಕ್ಕಳ ಶೈಕ್ಷಣಿಕ ಬದುಕಿಗೆ ಮಾರಕವಾಗಿದೆ. ಸಮಾಜದ ಸ್ವಾಸ್ಥ್ಯ ಕಾಪಾಡಲು ಸಾಂಸ್ಕೃತಿಕ ಚಟುವಟಿಕೆಗಳು ಅತ್ಯಗತ್ಯ. ಅಲ್ಲದೆ ನಾಟಕ, ಯಕ್ಷಗಾನ, ಸಂಗೀತ, ನೃತ್ಯ ಜಾನಪದ ಮುಂತಾದುವು ನಮ್ಮ ಲೋಕಾನುಭವನ್ನು ಹೆಚ್ಚಿಸಲು ಸಹಕಾರಿ" ಎಂದು ಎಸ್.ಡಿ.ಎಂ.ಸ್ವಾಯತ್ತ ಕಾಲೇಜು ಉಜಿರೆ ಇಲ್ಲಿನ ಪ್ರಾಂಶುಪಾಲರಾದ ಡಾ.ಬಿ.ಎ.ಕುಮಾರ ಹೆಗ್ಡೆ ಹೇಳಿದರು.ಅವರು ಸುಳ್ಯ ರಂಗಮನೆ ಸಾಂಸ್ಕೃತಿಕ ಕಲಾ ಕೇಂದ್ರದ ಆಶ್ರಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಲ್ಲಿ ನಡೆದ ನಾಲ್ಕು ದಿನಗಳ ರಂಗಸಂಭ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವರಾದ ಎಸ್. ಅಂಗಾರ ಮಾತನಾಡಿ ' ಕಳೆದ 23 ವರ್ಷಗಳಿಂದ ರಂಗಮನೆಯ ಚಟುವಟಿಕೆಯನ್ನು ಗಮನಿಸುತ್ತಾ ಸ್ವತ: ಪಾಲ್ಗೊಳ್ಳುತ್ತಾ ಬಂದವನು ನಾನು. ರಂಗಮನೆಯ ಮೂಲಕ ಒಳ್ಳೆಯ ಸದಭಿರುಚಿಯ ಪ್ರೇಕ್ಷಕ ಬಳಗವನ್ನು ಸೃಷ್ಟಿಸಿದ ಜೀವನ್ ರಾಂ ಅಭಿನಂದನಾರ್ಹರು. ಅವರೆಂದೂ ಪ್ರಶಸ್ತಿಗಾಗಿ ಶಿಫಾರಸ್ಸು ಕೇಳಲು ಬಂದವರಲ್ಲ. ಸುಳ್ಯದಲ್ಲಿ ಇನ್ನೂ ದೊಡ್ಡ ಪ್ರಮಾಣದಲ್ಲಿ ಒಂದು ಕಲಾ ಗ್ರಾಮವನ್ನೇ ನಿರ್ಮಾಣ ಮಾಡಬೇಕೆನ್ನುವ ಯೋಜನೆ ನಮ್ಮಲ್ಲಿದೆ' ಎಂದರು.

ಮುಖ್ಯ ಅತಿಥಿಯಾಗಿದ್ದ ಶ್ರೀ ನಾಟ್ಯಾಂಜಲಿ ಕಲಾ ಅಕಾಡೆಮಿ ಸುರತ್ಕಲ್ ಇಲ್ಲಿನ ನೃತ್ಯ ಗುರು ವಿದ್ವಾನ್ ಚಂದ್ರಶೇಖರ ನಾವುಡರು ಮಾತನಾಡಿ 'ತನ್ನ ವಾಸದ ಮನೆಯನ್ನೇ ಸಾಂಸ್ಕೃತಿಕ ತಾಣವನ್ನಾಗಿಸಿದ ಉದಾಹರಣೆ ಬೇರೆಲ್ಲೂ ಸಿಗಲಾರದು. ಇಲ್ಲಿನ ಸಮಯಪ್ರಜ್ಞೆ ಅಚ್ಚುಕಟ್ಟುತನ ಕಾರ್ಯಕ್ರಮದ ಗುಣಮಟ್ಟ ಎಲ್ಲವೂ ಸಂಘಟಕರಿಗೆ ಮಾದರಿಯಾಗಿದೆ' ಎಂದರು.

ರಂಗಮನೆಯ ಅಧ್ಯಕ್ಷ ಡಾ.ಜೀವನರಾಮ ಸುಳ್ಯ ಪ್ರಸ್ತಾವನೆಯೊಂದಿಗೆ ಎಲ್ಲರನ್ನೂ ಸ್ವಾಗತಿಸಿದರು.ರವೀಶ್ ಪಡ್ಡಂಬೈಲು ವಂದಿಸಿದರು.ಅಚ್ಚುತ ಅಟ್ಟೂರು ಕಾರ್ಯಕ್ರಮ ನಿರ್ವಹಿಸಿದರು.

ಪ್ರತಿದಿನ ತುಂಬಿ ತುಳುಕಿದ ರಂಗಮನೆ ರಂಗಸಂಭ್ರಮದ ನಾಲ್ಕು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರಂಗಮನೆಯ ಸಭಾಂಗಣ ಪ್ರೇಕ್ಷಕರಿಂದ ತುಂಬಿ ತುಳುಕಿತು. ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ನಾಯಿಮರಿ ನಾಟಕ, ಮೈಸೂರು ನಟನ ತಂಡದ ಕಣಿವೆಯ ಹಾಡು ನಾಟಕ, ರಾಮಕೃಷ್ಣ ಕಾಟುಕುಕ್ಕೆಯವರಿಂದ 999 ನೇ ದಾಸ ಸಂಕೀರ್ತನೆ, ಕೆನರಾ ಕಲ್ಚರಲ್ ಅಕಾಡೆಮಿ ಮಂಗಳೂರು ಅಭಿನಯದ ಶೂರ್ಪಣಖಾಯನ ನಾಟಕ, ಆಳ್ವಾಸ್‌ನ ಏಕಾದಶಾನನ ನಾಟಕ, ನಾಟ್ಯಾಂಜಲಿ ಕಲಾ ಅಕಾಡೆಮಿ ಸುರತ್ಕಲ್ ಇವರಿಂದ ದಶಾವತಾರ ನೃತ್ಯ ರೂಪಕ ಮುಂತಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರ ಬಹು ಮೆಚ್ಚುಗೆಗೆ ಪಾತ್ರವಾದವು.

ಮುಡ್ನೂರು ಮರ್ಕಂಜ ಭೋಜನಾಲಯ ಮತ್ತು ಡಿಜಿಟಲ್ ಗ್ರಂಥಾಲಯ ಕೊಠಡಿ ಉದ್ಘಾಟನೆ–ಪ್ರತಿಭಾ ಪುರಸ್ಕಾರ

ಮುಡ್ನೂರು ಮರ್ಕಂಜ ಸ.ಹಿ.ಪ್ರಾಶಾಲೆಯ ಭೋಜನಾಲಯ ಮತ್ತು ಡಿಜಿಟಲ್ ಗ್ರಾಂಥಾಲಯದ ಕೊಠಡಿ ಉದ್ಘಾಟನೆ–ಪ್ರತಿಭಾ ಪುರಸ್ಕಾರದ ಸಭೆ ಕಾರ್ಯಕ್ರಮವು ಎಸ್ ಡಿ ಎಂ ಸಿ ಅಧ್ಯಕ್ಷರಾದ ಮೀನಾಕ್ಷಿ ಬೊಮ್ಮೆಟ್ಟಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.



ಸಭಾ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಶ್ರೀ ಶ್ರೀ ರಾಜೇಶ್ ನಾಥ ಸ್ವಾಮೀಜಿ ದೀಪ ಬೆಳಗುವ ಮೂಲಕ ಉದ್ಘಾಟಿಸಿ ಮಾತನಾಡುತ್ತಾ ರಾಜಕೀಯವನ್ನು ಮಾಡುವುದು ಬೇಡ ಜೊತೆ ಜೊತೆ ಸೇರಿ ಬದುಕುವ ಕೆಲಸಗಳನ್ನು ಮಾಡೋಣ ಎಂದರು ಅಲ್ಲದೇ ಇಲ್ಲಿ ಈ ವರೆಗೆ ಯಾವುದೇ ರೀತಿಯಲ್ಲಿ ಏನನ್ನು ನೀಡದೇ ಇದ್ದವರು ಮುಂದಿನ ದಿನಗಳಲ್ಲಿ ನೀಡುವಂತೆ ಆಗಲಿ ಎಂದು ಹೇಳಿದರು ಸರಕಾರವು ಜನತೆಯನ್ನು ನಡೆಸುವುದು ಮಾತ್ರ ಆದರೆ ಸರಕಾರ ಇಲ್ಲಿಗೆ ಇನ್ನಷ್ಟು ಅನುಧಾನ ನೀಡಿ ಈ ಗ್ರಾಮವನ್ನು ಹೆಚ್ಚಿನ ಅಭಿವೃದ್ಧಿ ಪಡಿಸಲಿ ಹೆಸರಿಗಾಗಿ ಪ್ರತಿಷ್ಠೆಗಾಗಿ ಯಾರು ಕೂಡ ಈ ಕಾರ್ಯಕ್ರಮದ ಬಗ್ಗೆ ಹಿಂದಿನಿಂದ ಮಾತನಾಡಬಾರದು ಎಂದು ಹೇಳಿದರು.

ನಮ್ಮ ಶಾಲೆಯ ಅಭಿವೃದ್ಧಿಯಾದಗ ನಮ್ಮ ಗ್ರಾಮದ ಅಭಿವೃದ್ಧಿ ಆಗುತ್ತದೆ ಅಲ್ಲದೆ ಈ ರೀತಿಯಲ್ಲಿ ಮುಂದೆಯು ಎಲ್ಲಾ ಶಾಲೆಗಳಲ್ಲಿ ಕೂಡ ಅಭಿವೃದ್ಧಿ ಕಾರ್ಯಗಳು ಆಗುವಂತೆ ಆಗಲಿ ಎಂದು ಸಭಾ ಕಾರ್ಯಕ್ರಮದ ಮುಖ್ಯ ಅಥಿತಿಗಳಲ್ಲಿ ಓರ್ವರಾದ ಗ್ರಾಮದ ಮೊದಲ ಪ್ರಜೆ ಗೀತಾ ಹೋಸಳಿಕೆ ಹಾರೈಸಿದರು .

ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿದ್ದ ಬಾಲಕೃಷ್ಣ ಕೊಡೆಂಕಿರಿ ಮಾತಾಡಿ ಕೆಲಸ ಮಾಡಲು ಆಗದೇ ಇದ್ದರು ಪರವಾಗಿಲ್ಲಾ ಆದರೆ ದೂಶಿಸಿಕೊಂಡು ಹೋಗುವುದು ಸರಿಯಲ್ಲಾ ಎಂದು ಹೇಳಿದರು ಅಲ್ಲದೇ ಪ್ರೋಟೋಕಾಲ್ ಬಗ್ಗೆ ಈ ಸಂದರ್ಭದಲ್ಲಿ ಹೇಳುತ್ತಾ ಜನ ಪ್ರತಿನಿಧಿಗಳು ಬರುವಾಗ ತಡವಾಗುತ್ತದೆ ಆ ಹಿನ್ನಲೆಯಲ್ಲಿ ಇದನ್ನು ಕೂಡ ತಿಳಿಸಲಾಗಿದೆ ಎಂದರು. ಸರಿಪಡಿಸಬೇಕಿದೆ ಎಂದು ಹೇಳಿದರು. ಸಾಮಾನ್ಯ ಜನರಿಗೆ ಒಂದು ಮಾತಿದೆ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತರೆ ಮಾತ್ರ ಉನ್ನತ ಸ್ಥಾನ ಮಾನ ಪಡೆಯಲು ಸಾಧ್ಯವೆಂದು ಆದು ಅದು ತಪ್ಪು ಕಲ್ಪನೆ ಕನ್ನಡ ಮಾಧ್ಯಮದಲ್ಲಿ ಕಲಿತರು ಫಸ್ಟ್ ರಾಂಕ್ ಬರುತ್ತಾರೆ ಸರಕಾರಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಿ ಶಾಲೆಗಳನ್ನು ಉಳಿಸಬೇಕು ಎಂದು ಹೇಳಿದರು.

ವಿಧ್ಯಾರ್ಥಿ ಉಜ್ವಲ್ ತಮ್ಮ ಅಭಿಪ್ರಾಯವನ್ನು ಕಾರ್ಯಕ್ರಮದಲ್ಲಿ ವ್ಯಕ್ತಪಡಿಸುತ್ತ ನಾವು ಊಟ ಮಾಡಲು ನಮಗೆ ಸ್ಥಳ ಇರಲಿಲ್ಲ ನಲಿಕಲಿ ಕೊಠಡಿಯಲ್ಲಿ ಊಟವನ್ನು ಮಾಡುತ್ತಿದ್ದೆವು ನಮಗೆ ಇದೀಗ ಉತ್ತಮ ರೀತಿಯಲ್ಲಿ ಒಂದು ಊಟ ಮಾಡಲು ಹಾಲ್ ನಿರ್ಮಾಣ ಮಾಡಿಕೊಟ್ಟಿದ್ದಿರಿ ಇದಕ್ಕೆ ಸಹಕರಿಸಿದ ಎಲ್ಲರಿಗು ಧನ್ಯವಾದಗಳು ಎಂದು ಹೇಳಿದರು.

ಶಾಲಾ ಅಭಿವೃದ್ಧಿ ಸಮಿತಿ ರಾಜ್ಯಾಧ್ಯಕ್ಷರು ಮತನಾಡುತ್ತಾ ರಾಜಕಾರಣಿಗಳ ಮಕ್ಕಳು ಸರಕಾರಿ ಶಾಲೆಗೆ ಹೊಗಬೇಕು ಅಲ್ಲದೆ ಪ್ರಣಾಳಿಕೆಯಲ್ಲಿ ಇದನ್ನು ಸೇರಿಸಿಕೊಳ್ಳಬೇಕು ಎಂದು ಆಗ್ರಹಿಸಿದರು. ದೇಶದ ಭವಿಷ್ಯದ ನಿರ್ಮಾತೃರರು ಇಂದಿನ ಮಕ್ಕಳು ,ರಾಜ್ಯದಲ್ಲಿ ಪ್ರತಿ ವರ್ಷ 30 ರಿಂದ 40 ಶಾಲೆಗಳನ್ನು ಮುಚ್ಚುತ್ತಿದೆ ಎಂದು ಹೇಳಿದರು . ಶಿಕ್ಷಕರ ಮೇಲೆ ಒತ್ತಡಗಳನ್ನು ಹೇರಲಾಗುತ್ತಿದೆ , ಒಂದು ಊಟ ಮಾಡಲು ಹಾಲ್ ನಿರ್ಮಾಣ ಮಾಡಿಕೊಟ್ಟಿದ್ದಿರಿ ಇದಕ್ಕೆ ಸಹಕರಿಸಿದ ಎಲ್ಲರಿಗು ಧನ್ಯವಾದಗಳು ಎಂದು ಹೇಳಿದರು.

ಶಾಲಾ ಅಭಿವೃದ್ಧಿ ಸಮಿತಿ ರಾಜ್ಯಾಧ್ಯಕ್ಷರು ಮತನಾಡುತ್ತಾ ರಾಜಕಾರಣಿಗಳ ಮಕ್ಕಳು ಸರಕಾರಿ ಶಾಲೆಗೆ ಹೊಗಬೇಕು ಅಲ್ಲದೆ ಪ್ರಣಾಳಿಕೆಯಲ್ಲಿ ಇದನ್ನು ಸೇರಿಸಿಕೊಳ್ಳಬೇಕು ಎಂದು ಆಗ್ರಹಿಸಿದರು. ದೇಶದ ಭವಿಷ್ಯದ ನಿರ್ಮಾತೃರರು ಇಂದಿನ ಮಕ್ಕಳು ,ರಾಜ್ಯದಲ್ಲಿ ಪ್ರತಿ ವರ್ಷ 30 ರಿಂದ 40 ಶಾಲೆಗಳನ್ನು ಮುಚ್ಚುತ್ತಿದೆ ಎಂದು ಹೇಳಿದರು . ಶಿಕ್ಷಕರ ಮೇಲೆ ಒತ್ತಡಗಳನ್ನು ಹೇರಲಾಗುತ್ತಿದೆ , ಮಾನವನು ಪ್ರಜ್ಞಾವಂತರಾದಗ ಮಾತ್ರ ಸಮಾಜ ಸರಿಯಾಗುತ್ತದೆ ಎಂದು ನಿನ್ನೆ ನಡೆದ ಘಟನೆಯ ಎಲ್ಲಾ ವಿಚಾರಗಳನ್ನು ತಿಳಿದ ಬಳಿಕ ಮಾರ್ಮಿಕವಾಗಿ ಹೇಳಿದರು.

ಜಿ ಜಗನ್ನಾಥ ಜಯನಗರ ಮತನಾಡುತ್ತಾ ಶಿಕ್ಷಣ ಎಮಬುವುದು ಹುಲಿಯ ಹಾಲು ,ಗರ್ಜಿಸುವ ಸಂದರ್ಭದಲ್ಲಿ ಗರ್ಜಿಸಲೇಬೇಕು , ನಮ್ಮ ಕೆಲಸ ಕಾರ್ಯಗಳು ರಾಜಕೀಯ ಬಣ್ಣದಲ್ಲಿ ನೋಡುವುದು ಸರಿಯಲ್ಲ ನಾವು ಸೆಪ್ಟೆಂಬರ್ 13 2023 ರಂದು ಗುದ್ದಲಿ ಪೂಜೆ ನೆರವೇರಿಸಿ 14–02–24 ರಂದು ಉದ್ಘಾಟನೆ ಕಾರ್ಯಕ್ರಮವನ್ನು ನೆರವೇರಿಸಿದ್ದೆವೆ ಎಂದು ಹೇಳಿದರು . ಇನ್ನೋರ್ವ ಅಥಿತಿಗಳಾದ ಹೇಮಕುಮಾರ್ ಜೋಗಿ ಮೂಲೆ ಮತನಾಡುತ್ತಾ

ನಮ್ಮ ಮೇಲಿನ ಸಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ನಿಲ್ಲಿಸಲು ಬಿಇಒ ಇತಿಹಾಸದಲ್ಲೆ ಇದೇ ಮೊದಲ ಬಾರಿಗೆ ಪೋಲೀಸ್ ಇಲಾಖೆಗೆ ದೂರು ಕೊಟ್ಟು ಇಂದಿನ ಉದ್ಘಾಟನೆಯನ್ನು ತಡೆಯಲು ಪ್ರಯತ್ನಿಸಿದ್

ಕೆ.ವಿ.ಜಿ. ಇಂಜಿನಿಯರಿಗ್ ಕಾಲೇಜಿನಲ್ಲಿ 2023–24ನೇ ಸಾಲಿನ ಪ್ರಥಮ ವರ್ಷದ ಎಂ.ಬಿ.ಎ ಹಾಗೂ ಎಂ.ಟೆಕ್ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ

ಕೆವಿಜಿ. ತಾಂತ್ರಿಕ ಮಹಾವಿದ್ಯಾಲಯದ ಪ್ರಥಮ ವರ್ಷದ ಎಂ.ಬಿ.ಎ. ಹಾಗೂ ಎಂ.ಟೆಕ್ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮವು ಕೆ.ವಿ.ಜಿ.ಸಿ.ಇ. ಸಂಸ್ಥೆಯ ಸಭಾಂಗಣದಲ್ಲಿ ಫೆ.12 ರಂದು ನಡೆಯಿತು. ಈ ಸಮಾರಂಭಕ್ಕೆ ರೊಟೇರಿಯನ್ ಇಂಜಿನಿಯರ್ ಅಶ್ವಿನ್ ಎಲ್. ಶೆಟ್ಟಿ, ಆಡಳಿತಾಧಿಕಾರಿ, ವಿದ್ಯಾರಶ್ಮಿ ಸಮೂಹ ಶಿಕ್ಷಣಗಳ ಸಂಸ್ಥೆ, ನಿವೃತ್ತ ಇಂಜಿನಿಯರ್ ಮ್ಯಾನೇಜರ್ ಏರ್‌ಬಸ್, ಆಸ್ಟೆಲಿಯ ಇವರು ಮುಖ್ಯ ಅತಿಥಿಯಾಗಿದ್ದರು. ಇವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಆಧುನಿಕ ಜೀವನದಲ್ಲಿ ಎಂ.ಬಿ.ಎ. ಮತ್ತು ಎಂ.ಟೆಕ್ ವಿದ್ಯಾರ್ಥಿಗಳು ಕೌಶಲ್ಯಾಭಿವೃದ್ಧಿ ಹಾಗೂ ಕಠಿಣ ಪರಿಶ್ರಮದಿಂದ ಯಶಸ್ಸನ್ನು ಗಳಿಸಲು ಪೂರಕವಾದ ನಡವಳಿಕೆಯನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದರು. ಇದೇ ಸಂದರ್ಭದಲ್ಲಿ ಡಾ. ಉಜ್ವಲ್ ಯು.ಜೆ., ವಿ.ಟಿ.ಯು ಎಕ್ಸಿಕ್ಯುಟಿವ್ ಕೌನ್ಸಿಲ್ ಸದಸ್ಯರು/ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಂಪ್ಯೂಟರ್ ಸೈನ್ಸ್&ಎಎಮ್‌ಪಿ; ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಇವರು ಅತಿಥಿ ನೆಲೆಯಲ್ಲಿ ಮಾತನಾಡಿ ಕೆ.ವಿ.ಜಿ. ಇಂಜಿನಿಯರಿಂಗ್ ಕಾಲೇಜು ಹೊಸ ತಂತ್ರಜ್ಞಾನಕ್ಕೆ ಅನುಗುಣವಾಗಿ ಕಾಲೇಜಿನ ಶೈಕ್ಷಣಿಕ ಪದ್ಧತಿಯಲ್ಲೂ ಅತೀ ಹೆಚ್ಚಿನ ಪ್ರಾಮುಖ್ಯತೆಯನ್ನು ಪ್ರಾಯೋಗಿಕ ವಿಷಯಗಳಿಗೆ ಹಾಗೂ ಉದ್ಯೋಗ ತರಬೇತಿಗಳನ್ನು ನೀಡುತ್ತಿದ್ದು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಂಡು ಉತ್ತಮ ರೀತಿಯ ಉದ್ಯೋಗ ಪಡೆದು ಕಾಲೇಜಿಗೆ ಉತ್ತಮ ಹೆಸರು ತರಬೇಕೆಂದು ಶುಭಹಾರೈಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಸುರೇಶ ವಿ.ಯವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಜೀವನದಲ್ಲಿ ಶಿಸ್ತು ಮತ್ತು ನೈಪುಣ್ಯತೆಯು ಉತ್ತಮ ಶ್ರೇಣಿಯನ್ನು ಗಳಿಸುವುದರೊಂದಿಗೆ ಯಶಸ್ವಿ ಜೀವನಕ್ಕೆ ಉನ್ನತ ವಿದ್ಯಾಭ್ಯಾಸದ ಅವಶ್ಯಕತೆಯನ್ನು ತಿಳಿಯಪಡಿಸಿದರು. ಕಾರ್ಯಕ್ರಮದಲ್ಲಿ ಎಂ.ಬಿ.ಎ. ವಿಭಾಗದ ಮುಖ್ಯಸ್ಥ ಪ್ರೊ. ಕೃಷ್ಣಾನಂದ ಎ ಸ್ವಾಗತಿಸಿದರು. ಪ್ರೊ. ಮನೋಹರ್ ಎ.ಎನ್. ಧನ್ಯವಾದ ಸಮರ್ಪಿಸಿದರು. ಎಂ.ಬಿ.ಎ. ಅಂತಿಮ ವಿಭಾಗದ ವಿದ್ಯಾರ್ಥಿಗಳಾದ ಗಾಯತ್ರಿ ಎನ್. ನಂಬಿಯಾರ್ ಹಾಗು ಶಿಫಾ ಎಂ.ಎ. ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಉಪಪ್ರಾಂಶುಪಾಲ ಡಾ. ಶ್ರೀಧರ್ ಕೆ., ಕಾಲೇಜಿನ ಆಡಳಿತಾಧಿಕಾರಿ ನಾಗೇಶ್ ಕೊಚ್ಚಿ ಎಂ.ಬಿ. ಎ. ವಿಭಾಗದ ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕೆ.ವಿ.ಜಿ ಪಾಲಿಟೆಕ್ನಿಕ್ (ಸರಕಾರಿ ಅನುದಾನಿತ) ಸುಳ್ಯ ಇದರ ಉಪ ಪ್ರಾಂಶುಪಾಲರಾಗಿ ಅಣ್ಣಯ್ಯ ಕೆ. ನೇಮಕ

ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ (ರಿ) ಕಮಿಟಿ "ಬಿ" ಇದರ ಆಡಳಿತದಲ್ಲಿ ನಡೆಯುತ್ತಿರುವ ಕೆ.ವಿ.ಜಿ ಪಾಲಿಟೆಕ್ನಿಕ್ (ಸರಕಾರಿ ಅನುದಾನಿತ) ಸುಳ್ಯ ಇದರ ಉಪ ಪ್ರಾಂಶುಪಾಲರನ್ನಾಗಿ ಅಟೊಮೋಬೈಲ್ ವಿಭಾಗದ ಆಯ್ಕೆ ಶ್ರೇಣಿ ಉಪನ್ಯಾಸಕರಾದ ಅಣ್ಣಯ್ಯ ಕೆ ಇವರನ್ನು ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ (ರಿ) ಕಮಿಟಿ "ಬಿ" ಇದರ ಅಧ್ಯಕ್ಷರಾದ ಡಾ. ರೇಣುಕಾ ಪ್ರಸಾದ್ ಕೆ.ವಿ ಯವರು ಪದೋನ್ನತಿ ನೀಡಿ ನೇಮಕಗೊಳಿಸಿದ್ದಾರೆ. ಕರ್ನಾಟಕ ಪಾಲಿಟೆಕ್ನಿಕ್ ಮಂಗಳೂರು ಕಾಲೇಜಿನಲ್ಲಿ ಮೆಕ್ಯಾನಿಕಲ್ ವಿಭಾಗದಲ್ಲಿ ಪದವಿಯನ್ನು ಪಡೆದು 1988 ಜನವರಿ 4ರಂದು ಕೆ.ವಿ.ಜಿ ಪಾಲಿಟೆಕ್ನಿಕ್‌ಗೆ ಉಪನ್ಯಾಸಕರಾಗಿ ಸೇರ್ಪಡೆಗೊಂಡ ಇವರು 2010ರಿಂದ ಆಯ್ಕೆ ಶ್ರೇಣಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಕಡಬ ತಾಲೂಕು ಕುಂಡಡ್ಕ ಮನೆತನದ ಬಾಬುಗೌಡ ಮತ್ತು ಪೊನ್ನಕ್ಕ ದಂಪತಿಗಳ ಪುತ್ರ.

ಫೆ. 17–18 ; ಕಣ್ಕಲ್ ತರವಾಡು ಧರ್ಮದೈವ ಮತ್ತು ಪರಿವಾರ ದೈವಗಳ ಧರ್ಮ ನಡಾವಳಿ

ಕೇನ್ಯ ಗ್ರಾಮದ ಕಣ್ಕಲ್ ತರವಾಡು ಮನೆಯ ಶ್ರೀ ಧರ್ಮದೈವ ರುದ್ರಚಾಮುಂಡಿ ಮತ್ತು ಪರಿವಾರ ದೈವಗಳ ಧರ್ಮ ನಡಾವಳಿ ಫೆ. 17 ಮತ್ತು ಫೆ.18 ರಂದು ನಡೆಯಲಿದೆ.

ಫೆ. 17 ರಂದು ರಾತ್ರಿ ಶ್ರೀ ದೈವಗಳ ಭಂಡಾರ ತೆಗೆದು ದೈವಗಳ ನೇಮೋತ್ಸವ ನಡೆಯಲಿದೆ. ಫೆ 18 ರಂದು ಧರ್ಮದೈವ ರುದ್ರಚಾಮುಂಡಿ ದೈವದ ನೇಮ ನಡೆಯಲಿದೆ. ಮಧ್ಯಾಹ್ನ ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ನಡೆಯಲಿದೆ.

ಹೃದಯ ಪುನಶ್ಚೇತನ ಕೌಶಲ್ಯ ಅತ್ಯಗತ್ಯ– ಡಾ। ಕಿಶನ್ ರಾವ್ ಬಾಳಿಲ ಗೃಹರಕ್ಷಕರಿಗೆ ಹೃದಯ ಪುನಶ್ಚೇತನ ತರಬೇತಿ ಶಿಬಿರ

ಫೆ.13ರಂದು ದಕ್ಷಿಣ ಕನ್ನಡ ಜಿಲ್ಲಾ ಗೃಹರಕ್ಷಕ ದಳ ಕಛೇರಿ ಮೇರಿಹಿಲ್ ಮಂಗಳೂರು ಇಲ್ಲಿ ಗೃಹರಕ್ಷಕರಿಗೆ ಹೃದಯ ಪುನಶ್ಚೇತನ ಕೌಶಲ್ಯ ತರಬೇತಿ ಶಿಬಿರ ನಡೆಯಿತು.

ದಕ ಜಿಲ್ಲಾ ಗೃಹ ರಕ್ಷಕ ದಳ, ಲಯನ್ಸ್ ಕ್ಲಬ್ ಮಂಗಳೂರು ಮತ್ತು ಚೂಂತಾರು ಸರೋಜಿನಿ ಭಟ್ ಪ್ರತಿಷ್ಠಾನ ಇವರ ಜಂಟಿ ಆಶ್ರಯದಲ್ಲಿ ಈ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಲಯನ್ ಶೀನ ಪೂಜಾರಿ, ಅಧ್ಯಕ್ಷರು, ಲಯನ್ಸ್ ಕ್ಲಬ್ ಮಂಗಳೂರು ಮತ್ತು ಡಾ॥ ಮಹಾಲಿಂಗ ಶರ್ಮ ಸಂಪತ್ತಿಲ, ಹಿರಿಯ ಬಾಯಿ, ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ದಕ್ಷಿಣ ಕನ್ನಡ ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟರಾದ ಡಾ॥ ಮುರಲೀ ಮೋಹನ್ ಚೂಂತಾರು ಅವರು ಮಾತನಾಡಿ ಜನರ ಜೀವ ಉಳಿಸಲು ಗೃಹರಕ್ಷಕರನ್ನು ತರಬೇತಿಗೊಳಿಸಿ ಅವರನ್ನು ಜೀವರಕ್ಷಕರನ್ನಾಗಿ ತಯಾರಿಸುವ ನಿಟ್ಟಿನಲ್ಲಿ ಈ ತರಬೇತಿಯನ್ನು ಆಯೋಜಿಸಲಾಗಿದೆ. ಅಪಘಾತ ಅಥವಾ ಇನ್ನಾವುದೇ ಅವಘಡಗಳಾದಾಗ ತಕ್ಷಣವೇ ಸ್ಪಂದಿಸಲು ಈ ತರಬೇತಿ ಗೃಹರಕ್ಷಕರಿಗೆ ಅನುಕೂಲವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಸಂಪನ್ಮೂಲ ವ್ಯಕ್ತಿಗಳಾಗಿ ಮಂಗಳೂರಿನ ಎ.ಜೆ. ಆಸ್ಪತ್ರೆಯ ವೈದ್ಯರಾದ ಜನರಲ್ ಸರ್ಜನ್ ಡಾ॥ ಕಿಶನ್ ರಾವ್ ಬಾಳಿಲ ಇವರು ಶಿಬಿರವನ್ನು ನಡೆಸಿಕೊಟ್ಟರು. ಅವರು ಮಾತನಾಡಿ ಹೃದಯ ಪುನಶ್ಚೇತನ ಕೌಶಲ್ಯ ತರಭೇತಿ ಎಲ್ಲರಿಗೂ ದೊರಕಬೇಕು.ಸಾಮಾನ್ಯ ಮನುಷ್ಯರೂ ತುರ್ತು ಸಂದರ್ಭಗಳಲ್ಲಿ ಜೀವ ಉಳಿಸಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಗ್ರಹರಕ್ಷಕರಿಗೆ ನೀಡುವ ತರಭೇತಿ ಸ್ವಾಗತಾರ್ಹ ಎಂದು ನುಡಿದರು. ಈ ಸಂದರ್ಭದಲ್ಲಿ ಲಯನ್ಸ್ ಕ್ಲಬ್ ಮಂಗಳೂರು ಇದರ ಜೊತೆ ಕಾರ್ಯದರ್ಶಿಯಾದ ದಿನಕರ್ ಕೋಟ್ಯಾನ್ ಮತ್ತು ಜೊತೆ ಕೋಶಾಧಿಕಾರಿ ಶ್ರೀ ನಾರಾಯಣ ಕೋಟ್ಯಾನ್ ಉಪಸ್ಥಿತರಿದ್ದರು. ಗೃಹರಕ್ಷಕ, ಗೃಹರಕ್ಷಕಿಯರು ಈ ಶಿಬಿರದಲ್ಲಿ ಭಾಗವಹಿಸಿ ತರಬೇತಿಯನ್ನು ಪಡೆದುಕೊಂಡರು.

ಮುರೂರು–ಮಂಡೆಕೋಲು ರಸ್ತೆ ಕಾಮಗಾರಿ ಆರಂಭ : ಸಂಚಾರ ಸ್ಥಗಿತ



ಮಂಡೆಕೋಲು ಗ್ರಾಮದ ಮುರೂರು ಮಂಡೆಕೋಲು ರಸ್ತೆ ಅಭಿವೃದ್ಧಿಗೆ 30 ಲಕ್ಷ ಮಂಜೂರುಗೊಂಡಿದ್ದು ಕಾಮಗಾರಿ ಆರಂಭವಾಗಿದೆ. ಈ ಕಾಮಗಾರಿ ಮುಗಿಯುವ ವರೆಗೆ ರಸ್ತೆ ಸಂಚಾರ ಸ್ಥಗಿತ ಮಾಡಲಾಗಿದ್ದು ಸಾರ್ವಜನಿಕರು ಕಜಲ ಮೂಲಕ ಬದಲಿ ರಸ್ತೆಯಲ್ಲಿ ಸಂಚಾರ ಮಾಡುವಂತೆ ಗ್ರಾಪಂ. ಸದಸ್ಯ ಬಾಲಚಂದ್ರ ದೇವರಗುಂಡ ತಿಳಿಸಿದ್ದಾರೆ. ಮುರೂರಿಂದ ಬರುವವರು ಸೇತುವೆ ದಾಟಿ ಎಡ ಬದಿಯಲ್ಲಿ ಕಜಲ ರಸ್ತೆಯಾಗಿ ಮಂಡೆಕೋಲು ತಲುಪಬಹುದು. ಮಂಡೆಕೋಲಿನಂದ ಮುರೂರಿಗೆ ಹೋಗುವವರು ಮಂಡೆಕೋಲು ಹಾಲಿನ ಡೈರಿಯಿಂದ ಸ್ವಲ್ಪ ಮುಂದೆ ಬಲ ಭಾಗದ ರಸ್ತೆಯ ಮೂಲಕ ಕಜಲಕ್ಕಾಗಿ ಮುರೂರು ತಲುಪಬಹುದು. ಕಾಮಗಾರಿ ಆರಂಭ ಹಂತದಲ್ಲಿದ್ದು, ಮಗಿಯುವ ತನಕ ಸಾರ್ವಜನಿಕರು ಸಹಕಾರ ನೀಡುವಂತೆ ಅವರು ಕೇಳಿಕೊಂಡಿದ್ದಾರೆ.

ಪೆರಾಜೆ: ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾಗಿ ಲವೀನ್ ಡಿ.ಪಿ., ಉಪಾಧ್ಯಕ್ಷರಾಗಿ ಪಿ.ಕರುಣಾಕರ ಆಯ್ಕೆ

ಪೆರಾಜೆ (ಕಲ್ಲುಚರ್ಪೆ) ಹಾಲು ಉತ್ಪಾದಕರ ಸಹಕಾರ ಸಂಘದ 2024 – 2029 ಸಾಲಿನ ಆಡಳಿತ ಮಂಡಳಿಯ ನೂತನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಫೆ.09 ನಡೆಯಿತು.

ಅಧ್ಯಕ್ಷರಾಗಿ ಲವೀನ್ ಡಿ.ಪಿ., ಉಪಾಧ್ಯಕ್ಷರಾಗಿ ಪಿ.ಕರುಣಾಕರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ನಿರ್ದೇಶಕರಾದ ಎಂ.ಎಚ್. ಸತೀಶ, ಪಿ.ಎಂ.ರಾಮಕೃಷ್ಣ ಎನ್.ಎಸ್. ಮಹಾಬಲ, ಕೆಜಿಉಪೇಂದ್ರ ವೇದಾವತಿ ಕೆ.ವಿ., ಕೆ. ಬಿ. ಹೊನ್ನಪ್ಪ, ರತ್ನಾವತಿ ಎಂ. ಎಸ್., ಡಿ.ಡಿ.ಸುಷ್ಮಾ ಹಾಗೂ ಕಾರ್ಯದರ್ಶಿ ಇಂದಿರಾ ಪೆರಾಜೆ ಉಪಸ್ಥಿತರಿದ್ದರು. ರಿಟರ್ನಿಂಗ್ ಅಧಿಕಾರಿ ಶಿವಲಿಂಗಯ್ಯ ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು.

ಮುಹಿಮ್ಮಾತ್ ಸನದುದಾನ ಮಹಾ ಸಮ್ಮೇಳನ ಮತ್ತು ತ್ವಾಹಿರುಲ್ ಅಹ್ದಲ್ ತಂಜಳ್ ಉರೂಸ್ ಮುಬಾರಕ್ ಪ್ರಚಾರಾರ್ಥ ಸಂದೇಶ ಯಾತ್ರೆ

ಫೆ.15ರಿಂದ 18ರತನಕ ನಡೆಯುವ ಮುಹಿಮ್ಮಾತ್ ಸನದುದಾನ ಮಹಾ ಸಮ್ಮೇಳನ ಮತ್ತು ಸಯ್ಯಿದ್ ತ್ವಾಹಿರುಲ್ ಅಹ್ದಲ್ ತಂಜಳ್ 18 ನೇ ಉರೂಸ್ ಮುಬಾರಕ್ ಪ್ರಚಾರಾರ್ಥ ಸುಳ್ಯ ತಾಲೂಕು ಮುಹಿಮ್ಮಾತ್ ಅಲುಮ್ನಿ ಇದರ ಅಡಿಯಲ್ಲಿ ಹಮ್ಮಿಕೊಂಡ ಸಂದೇಶ ಯಾತ್ರೆಯನ್ನು ಕಲ್ಲುಗುಂಡಿಂ–ಟಲ್ಲಿ ಕರ್ನಾಟಕ ಮುಸ್ಲಿಂ ಜಮಾಅತ್, ಎಸ್‌ವೈಎಸ್, ಎಸ್‌ಎಸ್‌ಎಫ್ ಸ್ಥಳೀಯ ನಾಯಕರ ಮತ್ತು ಕಾರ್ಯಕರ್ತರ ಸಮ್ಮುಖದಲ್ಲಿ ಎಸ್‌ಎಂಎ ರೀಜನಲ್ ಅಧ್ಯಕ್ಷರಾದ ಹಮೀದ್ ಬೀಜ ಕೊಚ್ಚಿ ರವರು ಧ್ವಜವನ್ನು ಯಾತ್ರಾ ನಾಯಕ–ರಿಗೆ ಹಸ್ತಾಂತರಿಸುವ ಮೂಲಕ ಅಧಿಕೃತವಾಗಿ ಚಾಲನೆ ನೀಡಲಾಯಿತು.

ಈ ಯಾತ್ರೆಯು ಕಲ್ಲುಗುಂಡಿ, ಸುಳ್ಯ, ಮಂಡೆಕೋಲು, ಜಾಲ್ಸೂರು, ಎಲಿಮಲೆ, ಬೆಳ್ಳಾರೆ, ನಿಂತಿಕಲ್ಲು ಮಾರ್ಗವಾಗಿ ಎರಡು ದಿನಗಳಲ್ಲಿ ಹಾದು ಹೋಗಲಿದೆ.

ಫೆ.20–22 ; ಹರಿಹರಪಲ್ಲತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಜಾತ್ರೋತ್ಸವ – ಗೊನೆ ಮುಹೂರ್ತ

ಹರಿಹರ ಪಲ್ಲತ್ತಡ್ಕ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಫೆ. 20ರಿಂದ22ರ ವರೆಗೆ ಜಾತ್ರೋತ್ಸವ ನಡೆಯಲಿದ್ದು, ಗೊನೆ ಮುಹೂರ್ತ ಫೆ. 14ರಂದು ನಡೆಯಿತು.

ದೇವಸ್ಥಾನದ ಪ್ರಧಾನ ಅರ್ಚಕ ಸುಬ್ರಹ್ಮಣ್ಯ ನರಸಿಂಹ ಭಟ್ ಪೂಜಾ ವಿಧಿವಿಧಾನ ನೆರವೇರಿಸಿದರು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾದ ಕಿಶೋರ್ ಕೂಜುಗೋಡು, ಸದಸ್ಯರುಗಳಾದ ಭವಾನಿಶಂಕರ ಪೈಲಾಜೆ,ಚಂದ್ರಹಾಸ ಶಿವಾಲ, ಆನಂದ ಕೆರೆಕ್ಕೋಡಿ, ಚಂದ್ರಶೇಖರ ಕಿರಿಭಾಗ,ರೇಷ್ಮಾ ಕಟ್ಟಿಮನೆ, ಜ್ಯೋತಿ ಕಳಿಗೆ, ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶೇಷಪ್ಪ ಗೌಡ ಕಿರಿಭಾಗ, ಸದಸ್ಯರುಗಳಾದ ಜನಾರ್ದನ ಗುಂಡಿಹಿತ್ಲು, ಕೇಶವಮೂರ್ತಿ ಪಲ್ಲತ್ತಡ್ಕ, ಮೂಕಾಂಬಿಕ ಗುಂಡಿಹಿತ್ಲು, ಸೀತಾರಾಮ ಹರಿಹರ, ಹರ್ಷಿಣಿ ಕಟ್ಟಿಮನೆ, ಹಾಗೂ ವಿವಿದ ಸಮಿತಿಯ, ಪ್ರಭಾಕರ ಕಿರಿಭಾಗ, ದಿವಾಕರ ಮುಂಡಾಜೆ, ಮೊನಪ್ಪ ನಿರ್ಪಾಡಿ, ಕಿಶೋರ್ ಮುಂಡಾಜೆ, ಕುಮಾರ ಕುಕ್ಕುಂದ್ರಡ್ಕ, ಲಕ್ಷೀಶ ಇಜಿನಡ್ಕ, ಉಮೇಶ್ ಕಜ್ಜೋಡಿ, ಪೃಥ್ವಿ ಚಂದ್ರ ಮುಂಡಾಜೆ, ತಾರಾನಾಥ ಮುಂಡಾಜೆ, ರವಿ ಗೊಳ್ಯಾಡಿ, ರಾಮಕೃಷ್ಣ ಬಾಳುಗೋಡು, ವೀರಪ್ಪ ಕುಡುಮುಂಡೂರು, ಚಂದ್ರಕಲಾ ಕಟ್ರಮನೆ ಬಾಲಚಂದ್ರ ಕಲ್ಲೇರಿಕಟ್ಟ ನವೀನ ಮುಂಡಾಜೆ, ಹೇಮಮಾಲಿನಿ ವಿಜಯ ಜಯರಾಮ ಕಲ್ಲೇಮಠ, ಕಾರ್ಯದರ್ಶಿ ಲೋಕನಾಥ ಕಿರಿಭಾಗ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ವೆಂಕಟ್ ವಳಲಂಬೆ ನೇತೃತ್ವದಲ್ಲಿ ಬಿ.ಜೆ.ಪಿ. ಗ್ರಾಮ ಚಲೋ ಪೂರ್ವಭಾವಿ ಸಭೆ

ವಿಧಾನಸಭಾ ಕ್ಷೇತ್ರದ ಸಂಚಾಲಕ ವೆಂಕಟ್ ವಳಲಂಬೆಯವರ ನೇತೃತ್ವದಲ್ಲಿ ಬಿ.ಜೆ.ಪಿ. ಗ್ರಾಮ ಚಲೋ ಪೂರ್ವಭಾವಿ ಸಭೆಯು ಸುಳ್ಯದ ಬಿಜೆಪಿ ಕಚೇರಿಯಲ್ಲಿ ಫೆ.9ರಂದು ನಡೆಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯತೀಶ್ ಆರ್ವಾರ ಮಾಹಿತಿ ನೀಡಿದರು.

ನ.ಪಂ. ಮಾಜಿ ಅಧ್ಯಕ್ಷ ವಿನಯ ಕುಮಾರ್ ಕಂದಡ್ಕ, ಸಂತೋಷ್ ಕುಮಾರ್ ಶೆಟ್ಟಿ ಬೋಳ್ಯಾರ್ ವೇದಿಕೆಯಲ್ಲಿದ್ದರು. ಸಭೆಯಲ್ಲಿ ಮುಗುಪ್ಪು ಕೂಸಪ್ಪ ಗೌಡ,ಲೋಹಿತ್ ಕೊಡಿಯಾಲ, ಶೀನಪ್ಪ ಬಯಂಬು, ಹರ್ಷಿತ್ ಕಾರ್ಜ, ಹಿಮ್ಮತ್ ಕೆ.ಸಿ., ಅನೂಪ್ ಬಿಳಿಮಲೆ, ಅಜಿತ್ ಕಿಲಂಗೋಡಿ, ಜಯಂತಿ ಅಜ್ಜಾವರ, ಶಿವರಾಮ ನೆಕ್ರಾಜೆ ಸಹಿತ ಸುಮಾರು 30ರಷ್ಟು ಮಂದಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಪಂಜ : ಫೆಬ್ರವರಿ 21ರಿಂದ 23 ಕಂಡೂರು ತರವಾಡು ಕುಟುಂಬ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಧರ್ಮದೈವ ಮತ್ತು ಪರಿವಾರ ದೈವಗಳ ನೇಮೋತ್ಸವ

ಫೆ 21 ರಂದು ಪೂರ್ವಾಹ್ನ ಗಂಟೆ 8.00 ರಿಂದ ನಾಗದೇವರ ಸನ್ನಿಧಿಯಲ್ಲಿ ಸ್ವಸ್ತಿ ಪುಣ್ಯಾಹವಾಚನ, ಸ್ಥಳಶುದ್ಧಿ, ಕಲಶಪೂಜೆ, ಪ್ರತಿಷ್ಠಾಹೋಮ, ಆಶ್ಲೇಷಬಲಿ, ಕಲಶಾಭಿಷೇಕ, ತಂಬಿಲ ದೈವಸನ್ನಿಧಿಯಲ್ಲಿ ಸ್ವಸ್ತಿ ಪುಣ್ಯಾಹವಾಚನ, ಸಪ್ತಶುದ್ಧಿ, ಪ್ರಾಸಾದಶುದ್ಧಿ, ಗಣಪತಿ ಹೋಮ, ಪ್ರಸಾದ ವಿತರಣೆ. ಸಾಯಂಕಾಲ ರಾಕ್ಷೆಘ್ನ ಹೋಮ, ವಾಸ್ತು ಹೋಮ, ವಾಸ್ತು ಪೂಜೆ, ದಿಕ್ಪಾಲಕಬಲ, ದುರ್ಗಾನಮಸ್ಕಾರ ಪೂಜೆ, ಸತ್ಯನಾರಾಯಣ ಪೂಜೆ, ದೈವಗಳ ಬಿಂಬಶುದ್ಧಿ, ಬಿಂಬಧಾನ್ಯಾಧಿವಾಸ.

ಫೆ 22 ರಂದು ಪೂರ್ವಾಹ್ನ ಘಂಟೆ 6.00 ರಿಂದ ಕಲಶಪೂಜೆ, ಗಣಪತಿ ಹೋಮ ದಿವಾಗಂಟೆ 11.33ರ ವೃಷಭ ಲಗ್ನದಲ್ಲಿ ದೈವಗಳ ಪ್ರತಿಷ್ಠೆ, ಕಲಶಾಭಿಷೇಕ, ದುರ್ಗಾಹೋಮ, ತಂಬಿಲ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ಸಾಯಂಕಾಲ ಘಂಟೆ 4.00 ರಿಂದ ಭಜನಾ ಕಾರ್ಯಕ್ರಮ ಸಾಯಂಕಾಲ ಘಂಟೆ 6.00 ರಿಂದ ದೈವಗಳ ಭಂಡಾರ ತೆಗೆಯುವುದು, ಅನ್ನಸಂತರ್ಪಣೆ, ರಾತ್ರಿ ಕಲ್ಲುರ್ಟಿ, ಕುಟುಂಬ ಪಂಜುರ್ಲಿ, ವರ್ಣಾರ ಪಂಜುರ್ಲಿ ದೈವಗಳ ನೇಮೋತ್ಸವ.

ಫೆ 23 ರಂದು ಪೂರ್ವಾಹ್ನ ಘಂಟೆ 7.00 ರಿಂದ ಅಣ್ಣಪ್ಪ ಪಂಜುರ್ಲಿ ನೇಮೋತ್ಸವ ಧರ್ಮದೈವ ರುದ್ರಚಾಮುಂಡಿ ನೇಮೋತ್ಸವ ಗುಳಿಗ ನೇಮೋತ್ಸವ 12.30 ರಿಂದ ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ ಎಂದು ಕಂಡೂರು ಕುಟುಂಬಸ್ಥರು ತಿಳಿಸಿದ್ದಾರೆ.

ಸುಳ್ಯ ಎನ್ನೆಂಪಿಯುಸಿಯ ಮಾದೇಶ್ ಬಿ.ಪಿ. ರಾಷ್ಟ್ರ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಭಾಗಿ

ಜನವರಿ 24ರಿಂದ 27ರ ತನಕ ಆದಿ ಚುಂಚನಗಿರಿ ಕಾಲೇಜು ಮಂಡ್ಯ ಇಲ್ಲಿ ಸ್ಕೂಲ್ ಗೇಮ್ಸ್ ಫೆಡರೇಷನ್ ಇಂಡಿಯಾದವರು ಆಯೋಜಿಸಿದ್ದ ರಾಷ್ಟ್ರ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಸುಳ್ಯ

ಏನೆಕಲ್ಲು ರೈತ ಯುವಕ ಮಂಡಲ ಕಟ್ಟಡ ಉದ್ಘಾಟನಾ ಆಮಂತ್ರಣ ಪತ್ರಿಕೆ ಬಿಡುಗಡೆ

ಏನೆಕಲ್ಲು ರೈತ ಯುವಕಮಂಡಲದ ನೂತನ ಕಟ್ಟಡ ಸುಮಾರು ಒಂದು ಕೋಟಿ 30 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಳ್ಳುತಿದ್ದು ಇದರ ತಳ ಅಂತಸ್ತು ಸುಮಾರು 65 ಲಕ್ಷ ವೆಚ್ಚದಲ್ಲಿ ಉದ್ಘಾಟನಾ ಸಮಾರಂಭವು ಫೆಬ್ರವರಿ 24ರಂದು ನಡೆಯಲಿರುವುದು. ಅದರ ಅಂಗವಾಗಿ ಆಮಂತ್ರಣ ಪತ್ರಿಕೆಯನ್ನು ಇಂದು ರವಿವಾರ ಯುವಕ ಮಂಡಲದ ಕಟ್ಟಡದ ಆವರಣದಲ್ಲಿ ಬಿಡುಗಡೆಗೊಳಿಸಲಾಯಿತು. ಕಟ್ಟಡ ರಚನಾ ಸಮಿತಿಯ ಹಿರಿಯ ಉಪಾಧ್ಯಕ್ಷ ಶಿವರಾಮ ಏನೆಕ್ಕಲ್, ಹಿರಿಯರಾದ ಪ್ರಗತಿಪರ ಕೃಷಿಕ ಕಾರ್ಯಪ್ಪ ಗೌಡ ಪುಂಡಿಗದ್ದೆ, ಹಾಗೂ ಹಿರಿಯ ನಿವೃತ್ತ ಶಿಕ್ಷಕ ನಾಗರಾಜ ಪರಮಲೆ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಯುವಕ ಮಂಡಲದ ಕಟ್ಟಡ ರಚನಾ ಸಮಿತಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಯುವಕ ಮಂಡಲದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಹಾಗೂ ಊರ ಗಣ್ಯರು ಉಪಸ್ಥಿತರಿದ್ದರು.

ಚೈತ್ರ ಯುವತಿ ಮಂಡಲ(ರಿ) ಅಜ್ಜಾವರ ಹಾಗೂ ಪ್ರತಾಪ ಯುವಕ ಮಂಡಲ (ರಿ) ಅಜ್ಜಾವರ ವತಿಯಿಂದ ಕೆಡ್ಡಸ ಆಚರಣೆ

ಚೈತ್ರ ಯುವತಿ ಮಂಡಲ(ರಿ) ಅಜ್ಜಾವರ ಹಾಗೂ ಪ್ರತಾಪ ಯುವಕ ಮಂಡಲ (ರಿ) ಅಜ್ಜಾವರ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತುಳುನಾಡಿನ ವಿಶಿಷ್ಟ ಪರ್ವದಿನವಾದ ಕೆಡ್ಡಸವನ್ನು ಸೂರ್ಯಕುಮಾರ್ ನಿಲಯ, ಕಲ್ತಡ್ಕದಲ್ಲಿ ಆಚರಿಸಲಾಯಿತು. ಸರಕಾರಿ ಪ್ರೌಢಶಾಲೆ ಅಜ್ಜಾವರದ ಮುಖ್ಯೋಪಾಧ್ಯಾರಾದ ಶ್ರೀ ಗೋಪಿನಾಥ್ ಮೆತ್ತಡ್ಕರವರು ಕೆಡ್ಡಸದ ಮಹತ್ವ ವಿವರಿಸಿದರು. ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರಾದ ಲೋಕಯ್ಯ ಅತ್ಯಾಡಿ, ಯುವಜನ ಸಂಯುಕ್ತ ಮಂಡಳಿ ಸುಳ್ಯ ಇದರ ಉಪಾಧ್ಯಕ್ಷರಾದ ವಿಜಯಕುಮಾರ್ ಉಬರಡ್ಕ ಉಪಸ್ಥಿತರಿದ್ದರು. ಭೂಮಿತಾಯಿಯ ಆರಾಧನೆ ಮಾಡುವ ಕೆಡ್ಡಸದ ಈದಿನ ನವಧಾನ್ಯಗಳಿಗೆ ಬೆಲ್ಲ,ತೆಂಗಿನಕಾಯಿ ಚೂರುಗಳನ್ನು ಬೆರೆಸಿ ಬಾಳೆಎಲೆಯಲಿಟ್ಟು ನಮಿಸುವುದರ ಮೂಲಕ ಕತ್ತಿ, ಅರಶಿಣ, ಕಲಶ, ಕುಂಕುಮ, ಸೀಗೆ ಹುಡಿ, ನೊರೆಕಾಯಿ, ಸರೊಳಿ ಎಲೆ, ಮಾವಿನಎಲೆ, ಬಾಳೆಹಣ್ಣು ಹಲಸಿನ ಎಲೆ ವೀಳ್ಯದೆಲೆ, ಮಸಿತುಂಡು, ಮೆಣಸು,ಹುಳಿ, ಎಣ್ಣೆ ಮುಂತಾದುವುಗಳನ್ನು ಇಟ್ಟು ಕೆಡ್ಡಸದ ವಿಶೇಷ ಖಾದ್ಯ ಕುಚ್ಚಲುಕ್ಕಿಯನ್ನು ಹುರಿದು ಕುಟ್ಟಿಪುಡಿ ಮಾಡಿ ತಯಾರಿಸಿದ "ನನ್ನೆರಿ"ಯನ್ನು ಎಲ್ಲರಿಗೂ ಹಂಚಲಾಯಿತು.ಕಾರ್ಯಕ್ರಮದಲ್ಲಿ ಸ್ವಾಗತವನ್ನು ಚೈತ್ರ ಯುವತಿ ಮಂಡಲದ ಅಧ್ಯಕ್ಷೆ ಶ್ರೀಮತಿ ಶಶ್ಮಿ ಭಟ್ ಮಾಡಿದರು. ಯುವಕ ಮಂಡಲ ಗೌರವ ಸಲಹೆಗಾರಾದ ಚಿನಿಯ ಕಲ್ತಾಡ್ಕ ಕಾರ್ಯಕ್ರಮ ನಿರೂಪಣೆ ಮಾಡಿದರು. ಪ್ರತಾಪ ಯುವಕ ಮಂಡಲ ಅಧ್ಯಕ್ಷ ಗುರುರಾಜ್ ಅಜ್ಜಾವರ ಧನ್ಯವಾದ ಮಾಡಿದರು.

ಕೊಲ್ಲಮೊಗ್ರ ಗ್ರಾಮ ಪಂಚಾಯತ್

ಅಂಚೆ: ಕೊಲ್ಲಮೊಗ್ರು, ಸುಳ್ಯ ತಾಲೂಕು ದ. ಕ. - 574 219.

ವಾರ್ಡುಸಭೆ ಮತ್ತು ಗ್ರಾಮಸಭೆ

ಕೊಲ್ಲಮೊಗ್ರು ಗ್ರಾಮ ಪಂಚಾಯತ್ನ ವ್ಯಾಪ್ತಿಯ ಕೊಲ್ಲಮೊಗ್ರು ಮತ್ತು ಕಲ್ಕಾರು ಗ್ರಾಮದ 2023–24ನೇ ಸಾಲಿನ ಪ್ರಥಮ ಹಂತದ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ಈ ಕೆಳಗೆ ಕಾಣಿಸಿದ ದಿನಾಂಕಗಳಂದು ನಡೆಸಲಾಗುವುದು. ಸದ್ರಿ ವಾರ್ಡ್ ಸಭೆಗಳಿಗೆ ಮತ್ತು ಗ್ರಾಮ ಸಭೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಭಾಗವಹಿಸಿ ಗ್ರಾಮಾಭಿವೃದ್ಧಿಯ ಬಗ್ಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಬೇಕಾಗಿ ವಿನಂತಿ.

ವಾರ್ಡುಸಭೆಗಳ ವೇಳಾಪಟ್ಟಿ

ಕ್ರ. ಸಂ	ಗ್ರಾಮ	ವಾರ್ಡು ಸಂಖ್ಯೆ	ದಿನಾಂಕ	ಮತ್ತು ಸಮಯ	ಸ್ಥಳ
1	ಕೊಲ್ಲಮೊಗ್ರು	1	17–2–2024 ಶನಿವಾರ	ಪೂ.ಗಂ 10–30ಕ್ಕೆ	ಶ್ರೀ ಮಯೂರ ಕಲಾ ಮಂದಿರ, ಕೊಲ್ಲಮೊಗ್ರು
2	ಕೊಲ್ಲಮೊಗ್ರು	2	17–2–2024 ಶನಿವಾರ	ಪೂ.ಗಂ 12–00ಕ್ಕೆ	ಶ್ರೀ ಮಯೂರ ಕಲಾ ಮಂದಿರ, ಕೊಲ್ಲಮೊಗ್ರು
3	ಕಲ್ಕಾರು	3	17–2–2024 ಶನಿವಾರ	ಅ.ಗಂ 3–00ಕ್ಕೆ	ದ.ಕ.ಜಿ.ಪ.ಹಿ.ಪ್ರಾ. ಶಾಲೆ, ಕಲ್ಕಾರು

ಗ್ರಾಮ ಸಭೆ

ದಿನಾಂಕ ಮತ್ತು ಸಮಯ	ಗ್ರಾಮ ಸಭೆ ನಡೆಯುವ ಸ್ಥಳ
20–02–2024ನೇ ಮಂಗಳವಾರ ಪೂ.ಗಂಟೆ 10.30ಕ್ಕೆ	ಶ್ರೀ ಮಯೂರ ಕಲಾ ಮಂದಿರ, ಕೊಲ್ಲಮೊಗ್ರು

ನೋಡಲ್ ಅಧಿಕಾರಿ: ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಸುಳ್ಯ

ಶ್ರೀ ಚೆನ್ನಪ್ಪ ನಾಯ್ಕ ಬಿ.
ಪಂಚಾಯತ್ ಅಭಿವೃದ್ಧಿ ಅಧಿಕಾರಿ

ಶ್ರೀಮತಿ ಜಯಶ್ರೀ ಚಾಂತಾಳ
ಅಧ್ಯಕ್ಷರು

ಶ್ರೀ ಮೋಹನ್ ಕೆ.
ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗ

ಶ್ರೀ ಅಶ್ವಥ್ ವೈಯು
ಉಪಾಧ್ಯಕ್ಷರು ಹಾಗೂ ಸರ್ವಸದಸ್ಯರು

ಕೊಲ್ಲಮೊಗ್ರ ಗ್ರಾಮ ಪಂಚಾಯತ್

ಬಿ.ಸೂ: ಮನೆತೆರಿಗೆ ನೀರಿನ ತೆರಿಗೆ ತಾ.30–3–2024ಕ್ಕೆ ಮೊದಲು ಗ್ರಾಮ ಪಂಚಾಯತ್‌ಗೆ ಬಂದು ಪಾವತಿಸಿ ಗ್ರಾಮದ ಅಭಿವೃದ್ಧಿಗೆ ಸಹಕರಿಸಬೇಕಾಗಿ ಕೋರಿದೆ.

ಪೇರಡ್ಕ ಉರೂಸ್ ಸಮಾರಂಭ

ಪೇರಡ್ಕ ಗೂನಡ್ಕ ಸೌಹಾರ್ದತೆಯ ಪ್ರದೇಶ : ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್

ಪೇರಡ್ಕ ಗೂನಡ್ಕ ಪ್ರದೇಶವು ಹಿಂದಿನಿಂದಲೂ ಪ್ರದೇಶವಾಗಿದೆ. ಇಲ್ಲಿ ಹಲವಾರು ಸರ್ವಧರ್ಮಿಯರು ಪಾಲ್ಗೊಳ್ಳುತ್ತಿರುವುದು ಸಂತಸ ತಂದಿದೆ. ನಾವೆಲ್ಲರು ಜಾತ್ಯಾತೀತ ಮನೋಭಾವದಿಂದ ಸಹಬಾಳ್ವೆಯ ಜೀವನ ಸಡೆಸಬೇಕು ರಾಜಕೀಯ ಜೀವನದಲ್ಲಿ ಟೀಕೆಗಳು ಸಹಜ ಅದಕ್ಕೆಲ್ಲ ಎದೆ ಗುಂದುವನು ನಾನಲ್ಲ ಸೌಹಾರ್ಧತೆಯನ್ನು ನನ್ನ ಪೂರ್ವಿಕರಿಂದ ತಂದೆ– ತಾಯಿಯಿಂದ ಕಲಿತಿರುತ್ತೇನೆ ಎಂದು ಕರ್ನಾಟಕ ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಫರೀದ್ ಹೇಳಿದರು.

ಅವರು ಫೆ.9ರಂದು ಪೇರಡ್ಕ ತೆಕ್ಕಿಲ್ ಮೊಹಮ್ಮದ್ ಹಾಜಿ ವೇದಿಕೆಯಲ್ಲಿ ನಡೆದ ವಲಿಯುಲ್ಲಾಹಿ ದರ್ಗಾ ಶರೀಫಿನ ಉರೂಸ್ ಸಮಾರಂಭದ ಉದ್ಘಾಟನಾ ಸಮಾರಂಭದಲ್ಲಿ ವಿಶೇಷ ಆಹ್ವಾನಿತರಾಗಿ ಆಗಮಿಸಿ ಮಾತನಾಡಿದರು. ಈ ಊರಿನ ಅಭಿವೃದ್ಧಿ ಇತಿಹಾಸ ನನಗೆ ತಿಳಿದಿದೆ ನನ್ನನ್ನು ನಿಮ್ಮೆಲ್ಲರ ದುವಾ ಆಶೀರ್ವಾದದಿಂದ ಅಲ್ಲಾಹು ಈ ಪುಣ್ಯ ಸ್ಥಳಕ್ಕೆ ತಲುಪಿಸಿದ್ದಾರೆ ಇಲ್ಲಿಯ ಮತ್ತು ಊರಿನ ಅಭಿವೃದ್ಧಿ ಬಗ್ಗೆ ಮಿತ್ರ ಟಿ ಎಂ ಶಾಹಿದ್ ತೆಕ್ಕಿಲ್ ಮತ್ತು ಜಿ ಕೆ ಹಮೀದ್ ಗೂನಡ್ಕ ಅವರು ಸದಾ ತಿಳಿಸುತ್ತಾರೆ ಎಂದು ಸಂತಸ ವ್ಯಕ್ತಪಡಿಸಿ ಊರಿನ ಅಭಿವೃದ್ಧಿ ಬಗ್ಗೆ ಪರಿಸರದ ಸೌದರ್ಯದ ಬಗ್ಗೆ ಸಂತಸ ವ್ಯಕ್ತಪಡಿಸಿ ಹಿರಿಯರು ಕೊಡುಗೆಯನ್ನ ಸ್ಮರಿಸಿ ಸೌಹಾರ್ದತೆಯ ಬಗ್ಗೆ ಯುವಕರಿಗೆ ಮಾರ್ಗದರ್ಶನ ನೀಡಿದರು ಯುವಕರು ಪ್ರಚೋದನಗೆ ಒಳಗಾಗದೆ ಸಂಯಮದಿಂದ ಇರುವಂತೆ ಕರೆ ನೀಡಿದರು.

ಈ ಸಂಧರ್ಭದಲ್ಲಿ ಅವರನ್ನು ಮಸೀದಿಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಪೇರಡ್ಕ ಜುಮಾ ಮಸೀದಿ ಅಧ್ಯಕ್ಷ ಟಿ.ಎಂ ಶಹೀದ್ ತೆಕ್ಕಿಲ್ ಅಧ್ಯಕ್ಷತೆ ವಹಿಸಿದರು. ಬಹು। ಸಯ್ಯದ್ ಝೈನುಲ್ ಆಬಿದೀನ್ ಜಿಫ್ರಿತಂಗಳ್ ಬೆಳ್ತಂಗಡಿ ಕಾರ್ಯಕ್ರಮವನ್ನು ಉದ್ಘಾಟಿಸಿದರು ದುವಾ ನೆರವೇರಿಸಿದರು. ಧಾರ್ಮಿಕ ಪ್ರಭಾಷಣವನ್ನು ನೀಡಿದ ಖ್ಯಾತ ವಾಗ್ಮಿ ಅಲ್ ಹಾಜ್ ಸಿರಾಜುದ್ದೀನ್ ದಾರಿಮಿ ಕಕ್ಕಾಡ್ ನಮ್ಮ ಆಚಾರ ವಿಚಾರದಲ್ಲಿ ವ್ಯತ್ಯಾಸ ಇದ್ದರು ಮನುಷ್ಯತ್ವ ಬೇಕು, ನಾನು ಎಂಬ ಅಹಂಬಾವ ಇರಬಾರದು ಸ್ನೇಹ ಜೀವಿಯಾಗಿ ಬಾಳಬೇಕು ಎಂದರು. ಪೇರಡ್ಕ ಜುಮಾ ಮಸೀದಿ ಖತೀಬರಾದ ಬಹು। ರಿಯಾಝ್ ಪೈಝಿ ಎಮ್ಮೆಮಾಡು ದುವಾ ನೆರವೇರಿಸಿದರು.

ವೇದಿಕೆಯಲ್ಲಿ ಕಲ್ಲುಗುಂಡಿ ಜುಮಾ ಮಸೀದಿ ಖತೀಬ್ ಬಹು। ನಈಮ್ ಪೈಝಿ, ಅರಂತೋಡು ಜುಮಾ ಮಸೀದಿ ಖತೀಬ್ ಅಲ್ ಹಾಜ್ ಇಸಾಕ್ ಬಾಖವಿ, ಬೆಳ್ಳಾರೆ ಜುಮಾಮಸೀದಿ ಅಧ್ಯಕ್ಷ ಹಾಜಿ ಅಬೂಬಕ್ಕರ್ ಮಂಗಳ , ದ.ಕ ಜಿಲ್ಲಾ ಮದರಸ ಮ್ಯಾನೇಜ್ ಮೆಂಟ್ ಕೋಶಾಧಿಕಾರಿ ಅಬ್ದುಲ್ ಖಾದರ್ ಬಾಯಂಬಾಡಿ, ಬಹು। ಅಬ್ದುಲ್ ಫತ್ತಾಹ್ ಖಾಸಿಮಿ, ಬಹು। ಹಸೈನಾರ್ ಮುಸ್ಲಿಯಾರ್, ಅರಂತೋಡು ಜುಮಾ ಮಸೀದಿ ಅಧ್ಯಕ್ಷ ಅಶ್ರಫ್ ಗುಂಡಿ, ಸಂಪಾಜೆ ಜುಮಾ ಮಸೀದಿ ಅಧ್ಯಕ್ಷ ಹಮೀದಿಯ, ಕೊಯನಾಡು ಜುಮಾ ಮಸೀದಿ ಅಧ್ಯಕ್ಷ ಅಬ್ದುಲ್ ರಝಾಕ್ ಕೊಯನಾಡು, ಸುನ್ನಿಮಹಲ್ ಫೆಡರೇಶನ್ ಅಧ್ಯಕ್ಷ ಹಮೀದ್ ಹಾಜಿ, ತಾಜ್ ಮೊಹಮ್ಮದ್ ಸಂಪಾಜೆ, ಸಜ್ಜನ ಪ್ರತಿಷ್ಠಾನ ಅಧ್ಯಕ್ಷ ಡಾ।ಉಮ್ಮರ್ ಬೀಜದಕಟ್ಟೆ, ಮಾನವ ಸಂಪನ್ಮೂಲ ಬೆಂಗಳೂರು ಇದರ ವ್ಯವಸ್ಥಾಪಕ ಪಿ.ಎಂ ಹಾರೀಸ್ ತೆಕ್ಕಿಲ್ ಪೇರಡ್ಕ , ಎ.ಕೆ. ಹಸೈನಾರ್ ಕಲ್ಲುಗುಂಡಿ, ಸಿ.ಎಫ್.ಸಿ ಕಲ್ಲುಗುಂಡಿ ಅಧ್ಯಕ್ಷ ಹಸೈನಾರ್ ಚಟ್ಟಿಕ್ಕಲ್, ಮಾಜಿ ಅಧ್ಯಕ್ಷರಾದ ಆಲಿ ಹಾಜಿ, ಹಾಜಿ ಇಬ್ರಾಹಿಂ ಮೈಲುಕಲ್ಲು, ಎಸ್.ಕೆ.ಎಸ್. ಎಸ್.ಎಫ್ ಅಧ್ಯಕ್ಷ ಮುನೀರ್ ದಾರಿಮಿ, ಜಮಾಅತ್ ಕಾರ್ಯದರ್ಶಿ ಪಿ.ಕೆ ಉಮ್ಮರ್ ಮೊದಲಾದವರು ಉಪಸ್ಥಿತರಿದ್ದರು.

ಎಂ.ಆರ್.ಡಿ.ಎ. ಅಧ್ಯಕ್ಷ ಜಿ.ಕೆ ಹಮೀದ್ ಗೂನಡ್ಕ ಸ್ವಾಗತಿಸಿದರು. ಅಬ್ದುಲ್ ಖಾದರ್ ಮೊಟ್ಟೆಂಗಾರ್ ವಂದಿಸಿದರು.

ಸುಳ್ಯ: ಜನತಾದಳ ಜಾತ್ಯಾತೀತ ಪಕ್ಷದ ಪದಾಧಿಕಾರಿಗಳ ಸಭೆ

ಜನತಾದಳ ಜಾತ್ಯಾತೀತ ಪಕ್ಷದ ಪದಾಧಿಕಾರಿಗಳ ಸಭೆಯು ಪಕ್ಷದ ಕಛೇರಿಯಲ್ಲಿ ಫೆ.10ರಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ತಾಲೂಕು ಘಟಕದ ಅಧ್ಯಕ್ಷರಾದ ಸುಕುಮಾರ್ ಕೋಡ್ತುಗುಳಿ ಇವರು ವಹಿಸಿದ್ದರು. ಈ ಸಭೆಯಲ್ಲಿ ಪ್ರಸ್ತುತ ರಾಜ್ಯದಲ್ಲಿನ ರಾಜಕೀಯ ಬೆಳವಣಿಗಳ ಬಗ್ಗೆ ಚರ್ಚೆ ನಡೆಯಿತು.

ಹಾಗೆಯೇ ಎಪ್ರಿಲ್ 2024ರ ಸಾಲಿನಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆ ಹಾಗೂ ಮುಂಬರುವ ಜಿಲ್ಲಾ ಪಂಚಾಯತ್ ಹಾಗು ತಾಲೂಕು ಪಂಚಾಯತ್ ಚುನಾವಣೆಗಳಲ್ಲಿ ಪ್ರದೇಶ ಜನತಾದಳದ ರಾಜ್ಯಾಧ್ಯಕ್ಷರು ತೀರ್ಮಾನಿಸುವ ಆದೇಶದಂತೆ ಪಕ್ಷವು ಕಾರ್ಯನಿರ್ವಹಿಸುವುದೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಹಾಗೆಯೇ ಮಹಿಳಾ ಘಟಕದ ಹಾಗೂ ಇತರ ಸಮಿತಿಗಳನ್ನು ರಚಿಸಿ ಪಕ್ಷವನ್ನು ಬಲಪಡಿಸುವ ಬಗ್ಗೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಈ ಸಭೆಯಲ್ಲಿ ಜಿಲ್ಲಾಧ್ಯಕ್ಷರಾದ ಜಾಕೆ ಮಾಧವ ಗೌಡ, ಮಹಿಳಾ ಅಧ್ಯಕ್ಷರಾದ ಮಹಾಲಕ್ಷ್ಮಿ ಕೊರಂಬಡ್ಕ, ಪರಿಶಿಷ್ಟ ಜಾತಿ ಹಾಗೂ ಪಂಗಡದ ಅಧ್ಯಕ್ಷರಾದ ಎಂ.ಬಿ. ಜೋಮ, ತಾಲೂಕು ಉಪಾಧ್ಯಕ್ಷರಾದ ರೋಹನ್ ಪೀಟರ್, ಖಜಾಂಚಿ ಸುರೇಶ್ ನಡ್ಕ, ಅರಂತೋಡು ಗ್ರಾಮ ಉಸ್ತುವಾರಿ ದೇಮಾಮ ಬಾಳಕಜೆ, ಕಛೇರಿ ಕಾರ್ಯದರ್ಶಿ ಗೋಪಾಲ ಪೂರ್ಲಮಕ್ಕಿ ಹಾಗೂ ಕಾರ್ಯಕರ್ತರಾಗಿರುವ ರಾಮಚಂದ್ರಗೌಡ, ಎಂ ಹುಕ್ರಾ ಮೊದಲಾದವರು ಉಪಸ್ಥಿತರಿದ್ದರು. ಕಾರ್ಯದರ್ಶಿ ರಾಕೇಶ್ ಕುಂಟಿಕಾನರವು ಎಲ್ಲರನ್ನು ಸ್ವಾಗತಿಸಿ ವಂದಿಸಿದರು.

ಗುತ್ತಿಗಾರು: 'ಮಗಳನ್ನು ಉಳಿಸಿ ಮಗಳನ್ನು ಓದಿಸಿ ಯೋಜನೆ ಅಡಿ ಜಾಥಾ' ಕಾರ್ಯಕ್ರಮ

ಅಮರ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟ ಗುತ್ತಿಗಾರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಸುಳ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗ್ರಾಮ ಪಂಚಾಯತ್ ಗುತ್ತಿಗಾರು ಶಂಖಶ್ರೀ ಸ್ತ್ರೀ ಶಕ್ತಿ ಗೊಂಚಲು ಗುತ್ತಿಗಾರು ಹಾಗೂ ಅಮರ ಸಂಜೀವಿನಿ ಒಕ್ಕೂಟ ಗುತ್ತಿಗಾರು ಇದರ ಸಹಯೋಗದಲ್ಲಿ 'ಮಗಳನ್ನು ಉಳಿಸಿ ಮಗಳನ್ನು ಓದಿಸಿ ಯೋಜನೆ ಅಡಿ ಜಾಥಾ' ಕಾರ್ಯಕ್ರಮದಲ್ಲಿ ಮತ್ತು ಬಾಗಿದಾರರಿಗೆ ಅರಿವು ಕಾರ್ಯಕ್ರಮವು ಗುತ್ತಿಗಾರು ಗ್ರಾಮಪಂಚಾಯತ್ ಗಿರಿಜನ ಸಭಾಂಗಣದಲ್ಲಿ ನಡೆಯಿತು. ಪಂಚಾಯತ್‌ನ ಉಪಾಧ್ಯಕ್ಷೆ ಭಾರತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಂದ್ರಪ್ಪಾಡಿ: ಜಾತ್ರಾ ಮುಹೂರ್ತ

ಕಂದ್ರಪ್ಪಾಡಿ ಜಾತ್ರಾ ಮುಹೂರ್ತ ಪೈಕ ಮಣಿಯಾನ ಮನೆ ಪುರುಷೋತ್ತಮ ಇವರ ತೋಟದಲ್ಲಿರುವ ಕಂಚುಕಲ್ಲಿಗೆ ಫೆ10ರಂದು ಮೂಲ ಸಂಪ್ರದಾಯದಂತೆ ಕಾಯಿ ಒಡೆಯಲಾಯಿತು.ಇನ್ನೂ ಕಂದ್ರಪ್ಪಾಡಿ ಸೀಮೆಗೆ ಸಂಬಂಧಪಟ್ಟಂತೆ ಗ್ರಾಮಗಳಲ್ಲಿ ಯಾವುದೇ ಶುಭಕಾರ್ಯಗಳು ನಡೆಯುವಂತಿಲ್ಲ.

ಗ್ರಾಮೀಣ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣಗಳ ವಿತರಣೆ

ದ.ಕ.ಜಿಲ್ಲಾ ಪಂಚಾಯತ್ ಗ್ರಾಮೀಣ ಕೈಗಾರಿಕಾ ವಿಭಾಗ 2023–24ನೇ ಸಾಲಿನ ಗ್ರಾಮೀಣ ಕುಶಲಕರ್ಮಿಗಳಿಗೆ ಉಚಿತ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ಹಾಗೂ ಸುಧಾರಿತ ಉಪಕರಣಗಳ (ಸಲಕರಣೆ ವಿತರಣೆ) ವಿತರಣಾ ಕಾರ್ಯಕ್ರಮ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು. ಶಾಸಕಿ ಭಾಗೀರಥಿ ಮುರುಳ್ಯ ಯಂತ್ರಗಳನ್ನು ವಿತರಿಸಿದರು.

ಹೊಲಿಗೆ ಯಂತ್ರ 36, ಇಲೆಕ್ಟ್ರಿಕಲ್ 6, ಬಡಗಿ 28, ಕಮ್ಮಾರಿಕೆ, ಗಾರೆ 31, ಆಟೋಮೊಬೈಲ್ ಸೇರಿ ಒಟ್ಟು 110 ಮಂದಿಗೆ ಉಪಕರಣ ವೃತ್ತಿಪರ ಕುಶಲ ಕರ್ಮಿಗಳಿಗೆ ವಿತರಿಸಿದರು.

ಸರಕಾರದಿಂದ ಸಿಗುವ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಎಸ್.ಎನ್.ಮನ್ಮಥ, ತಾಲೂಕು ಪಂಚಾಯತ್ ವ್ಯವಸ್ಥಾಪಕರಾದ ಹರೀಶ್. ಕೆ, ಉಪಸ್ಥಿತರಿದ್ದರು. ಕೈಗಾರಿಕೆ ಮತ್ತು ವಾಣೀಜ್ಯ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಇಲಾಖೆಯ ಸಮೀಕ್ಷಾ ಆಶಾಲತಾ ಮತ್ತಿತರರು ಉಪಸ್ಥಿತರಿದ್ದರು.

ಪೈಂಬೆಚ್ಚಾಲು ಅಂಗನವಾಡಿ ಕೇಂದ್ರಕೆ ಮಿಕ್ಸಿ ಹಾಗೂ ಟೇಬಲ್ ಕೊಡುಗೆ

ಪೈಂಬೆಚಾಲು ಅಂಗನವಾಡಿ ಕೇಂದ್ರಕ್ಕೆ ಡಾಟ ಮಹಮ್ಮದ್ ದರ್ಕಾಸ್ತುರವರು ಅಗತ್ಯವಾಗಿ ಅಂಗನವಾಡಿ ಕೇಂದ್ರಕ್ಕೆ ಬೇಕಾಗಿದ್ದ ಮಿಕ್ಸಿ, ಟೇಬಲ್ ಅನ್ನು ಕೊಡುಗೆಯಾಗಿ ನೀಡಿರುತ್ತಾರೆ.

ಈ ಸಂದರ್ಭ ಅಂಗನವಾಡಿ ಕಾರ್ಯಕರ್ತೆ ಜಲಜಾಕ್ಷಿ ಕೊಯಾಂಗಜೆ, ಗ್ರಾಮ ಪಂಚಾಯತ್ ಸದಸ್ಯರಾದ ಧರ್ಮಪಾಲ ಕೊಯಂಗಾಜೆ, ಮೂಸಾ ದರ್ಕಾಸ್ತು, ಮಾಜಿ ಗ್ರಾಮ ಪಂಚಾಯತ್ ಸದಸ್ಯರಾದ ಅರಿಷ್, ಬಾಲವಿಕಾಸ ಸಮಿತಿ ಅಧ್ಯಕ್ಷೆ ಅಂಬಿಕಾ, ಅಂಗನವಾಡಿ ಅಡುಗೆ ಸಹಾಯಕಿ ರೋಹಿಣಿ, ಪುಷ್ಪಾವತಿ ಕುಡೆಂಬಿ ಹಾಗೂ ಅಂಗನವಾಡಿ ಪುಟಾಣಿ ಮಕ್ಕಳು ಉಪಸ್ಥಿತರಿದ್ದರು

ಮಡಪ್ಪಾಡಿ: ಸುಜೋಕ್ ಮತ್ತು ಅಕ್ಯುಪ್ರೆಶರ್ ಚಿಕಿತ್ಸಾ ಶಿಬಿರ ಉದ್ಘಾಟನೆ

ಯುವಕ ಮಂಡಲ (ರಿ.) ಮಡಪ್ಪಾಡಿ ಆಶ್ರಯದಲ್ಲಿ 7 ದಿನಗಳ ಸುಜೋಕ್ ಮತ್ತು ಅಕ್ಯುಪ್ರೆಶರ್ ಚಿಕಿತ

ಕಂದ್ರಪ್ಪಾಡಿ ಶಾಲಾ ಶತಮಾನೋತ್ಸವ ಸಮಾರೋಪ– ಶಾಲೆಯಲ್ಲಿ ಸೇವೆ ಸಲ್ಲಿಸಿದ ಶಿಕ್ಷಕರುಗಳಿಗೆ ಸನ್ಮಾನ

ಕಂದ್ರಪ್ಪಾಡಿ ಸ.ಹಿ.ಪ್ರಾ. ಶಾಲಾ ಶತಮಾನೋತ್ಸವ ಕಾರ್ಯಕ್ರಮದ ಸಮಾರೋಪ ಸಮಾರಂಭ ಹಾಗೂ ಶಾಲೆಯಲ್ಲಿ ಸೇವೆ ಸಲ್ಲಿಸಿದ ಎಲ್ಲಾ ಶಿಕ್ಷಕರಿಗೆ ಸನ್ಮಾನ , ಸ್ಮರಣ ಸಂಚಿಕೆ ಬಿಡುಗಡೆ ನಡೆಯಿತು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಮಾಜಿ ಸಚಿವ ರಮಾನಾಥ ರೈ ಅವರು ಮಾತನಾಡಿ ಊರು ಹೇಗೆ ಉಂಟು ಎಂದು ನೋಡಬೇಕಾದರೇ ಶಾಲೆ ಹೇಗೆ ಇದೆ ಎಂದು ನೋಡಬೇಕು. ನಮ್ಮೂರ ಶಾಲೆಯನ್ನು ಬೆಳೆಸುವ ಜವಾಬ್ದಾರಿ ನಮ್ಮದು ಕೂಡ ಇದೆ. ಶಾಲೆಯ ಇತಿಹಾಸ ದಾಖಲೀಕರಣ ಮಾಡುತ್ತಿರುವುದು ಉತ್ತಮ ಕಾರ್ಯ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಮಾಜಿ ಸಚಿವ ಎಸ್.ಅಂಗಾರ ಮಾತನಾಡಿ ಪಡೆದ ವಿದ್ಯೆಯನ್ನು ಬಳಸುವ ಬಗ್ಗೆ ಹಿರಿಯರ ಮಾರ್ಗದರ್ಶನ ಅತ್ಯಗತ್ಯ ಆಗ ಮಾತ್ರ ಉತ್ತಮ ದಾರಿಯಲ್ಲಿ ಸಾಗಲು ಸಾಧ್ಯ. ಹಿರಿಯರಿಗೆ ಗೌರವ ಕೊಡುವುದನ್ನು ಮಕ್ಕಳಲ್ಲಿ ಬೆಳೆಸಬೇಕು ಎಂದರು.

ದಿಕ್ಸೂಚಿ ಭಾಷಣಕಾರರಾಗಿ ಆಗಮಿಸಿದ ವಿಶ್ರಾಂತ ಕುಲಪತಿಗಳಾದ ಡಾ. ಕೆ. ಚಿನ್ನಪ್ಪ ಗೌಡ ಮಾತನಾಡಿ ಶಾಲೆಗಳು ಘನತೆಯ ಬದುಕನ್ನು ಕಟ್ಟಿ ಕೊಟ್ಟಿದೆ. ಸರಕಾರಿ ಶಾಲೆಯ ಗುಣಮಟ್ಟ ಇನ್ನೂ ಉಳಿದುಕೊಂಡಿದೆ. ಶಾಲೆಗಳು ಜ್ಞಾನವನ್ನು

ಹಂಚುವ ಕೆಲಸ ಮಾಡುತ್ತಿದೆ. ಜ್ಞಾನ ನಮಗೆ ಅಂತರಂಗದಲ್ಲಿ ಹುಟ್ಟಬೇಕು ಆ ಕೆಲಸ ಸರಕಾರಿ ಶಾಲೆಗಳಲ್ಲಿ ಆಗುತ್ತಿದೆ. ಶಿಕ್ಷಣ ಬಂದರೂ ಸಂಬಂಧಗಳು ಛಿದ್ರಗೊಳ್ಳುತ್ತಿರುವ ಬಗ್ಗೆ ಆಲೋಚಿಸಬೇಕಿದೆ. ಶಿಕ್ಷಣ ಆರೋಗ್ಯ ಎಲ್ಲರಿಗೂ ಸಮಾನವಾಗಿ ಸಿಗಬೇಕಾಗಿದೆ. ಶಿಕ್ಷಣ ಕಲ್ಪಿಸಿ ಸದುಪಯೋಗ ಮಾಡಲು ಸಲಹೆ ನೀಡಿದಾಗ ಉತ್ತಮ ವ್ಯಕ್ತಿಯಾಗಲು ಸಾಧ್ಯ ಎಂದರು.

ವಿಧಾನ ಪರಿಷತ್ ಸದಸ್ಯ ಹಾಗೂ ವಿಪಕ್ಷ ನಾಯಕ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ ಮೆರಿಟ್ ನಲ್ಲಿ ಇರುವ ಶಿಕ್ಷಕರಿದ್ದರೇ ಅದು ಸರಕಾರಿ ಶಾಲೆಯಲ್ಲಿ ಮಾತ್ರ, ಶಿಕ್ಷಣ ಜಾಸ್ತಿ ಆದಂತೆಯೇ ನಾಗರಿಕ ಸಮಾಜದ ತಪ್ಪು ದಾರಿ ಹಿಡಿಯುವುದು ಕಡಿಮೆಯಾಗಿಲ್ಲ. ದೇಶಾಭಿಮಾನ ಮೂಡುವ ಶಿಕ್ಷಣ ನೀಡುವ ಅಗತ್ಯವಿದೆ ಕಾರ್ಯಕ್ರಮದಲ್ಲಿ ಶಾಸಕಿ ಭಾಗೀರಥಿ ಮುರುಳ್ಯ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನ್ ರಾಮ್ ಸುಳ್ಳಿ, ದೇವಚಳ್ಳ ಗ್ರಾಪಂ. ಸದಸ್ಯರಾದ ರಮೇಶ್ ಪಡ್ಪು, ಭವಾನಿಶಂಕರ ಮುಂಡೋಡಿ, ಕಾಳಿಕಾಪ್ರಸಾದ್ ಮುಂಡೋಡಿ, ದಾನಿ,ಉದ್ಯಮಿ ಉಮೇಶ್ ಮುಂಡೋಡಿ, ಶಾಲಾ ಶತಮಾನೋತ್ಸವ ಸಮಿತಿ ಅಧ್ಯಕ್ಷ ನಿತ್ಯಾನಂದ ಮುಂಡೋಡಿ, ಪ್ರ. ಕಾರ್ಯದರ್ಶಿ ಲಿಂಗಪ್ಪ ಗೌಡ ಚಿತ್ತಡ್ಕ, ಶಾಲಾ ಮುಖ್ಯ ಶಿಕ್ಷಕಿ ವಾಣಿ ಕೆ.ಎಸ್., ಎಸ್.ಡಿ.ಎಂ.ಸಿ. ಅಧ್ಯಕ್ಷ ಚಂದ್ರಶೇಖರ ಕಂದ್ರಪ್ಪಾಡಿ, ಸಮಿತಿಯ ಗೌರವಾಧ್ಯಕ್ಷ ಕುಶಾಲಪ್ಪ ಮಾಸ್ತರ್ ರುದ್ರಚಾಮುಂಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಾಲೆಯಲ್ಲಿ ಸೇವೆ ಸಲ್ಲಿಸಿದ ಶಿಕ್ಷಕರುಗಳಾದ ತೇಜಪ್ಪ ಸಂಪ್ಯಾಡಿ, ಜಯಕುಮಾರ್ ಡಿ.ಆರ್. , ವೀರಪ್ಪ ಗೌಡ ಎಂ., ಚಂದ್ರಕಲಾ ಕೆ.ಸಿ., ರಾಮಕ್ಕ ಡಿ., ಬೆಳ್ಯಪ್ಪ ಗೌಡ ಕೋಡ್ತುಗುಳಿ, ಲಲಿತಾ ಕುಮಾರಿ ಎಸ್., ಪ್ರಭಾಕರ ಟಿ., ಮಮತಾ ಎಂ.ಜೆ., ಶೇಷಮ್ಮ, ಸೀತಮ್ಮ ಕುಡೆಕಲ್ಲು ಆಶಾರಾಣಿ, ಅಜಯ ಕೆ.ಎಂ., ಮಾಧವ ಮೂಕಮಲೆ, ಜತ್ತಪ್ಪ ಮಾಸ್ತರ್ ಚಿಲ್ತಡ್ಕ, ವಾಣಿ ಕೆ.ಎಸ್., ಮನೋರಮ ಕೆ, ಪರಮೇಶ್ವರಿ ಉಬರಡ್ಕ, ಜೋಸೇಫ್ ಪಿರೇರಾ, ವೆಂಕಟ್ರಮಣ ಅಡ್ಡನಪಾರೆ, ಕುಶಾಲಪ್ಪ ರುದ್ರಚಾಮುಂಡಿ, ರೇಗಪ್ಪ ಬಿಳಿಮಲೆ ಇವರುಗಳನ್ನು ಸನ್ಮಾನಿಸಲಾಯಿತು. ಸ್ಮರಣ ಸಂಚಿಕೆ "ಶತಯಾನ" ಬಗ್ಗೆ ಸಾಹಿತಿ ಎ.ಕೆ. ಹಿಮಕರ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವೇಣುಕುಮಾರ್ ಚಿತ್ತಡ್ಕ ಪ್ರಾರ್ಥಿಸಿದರು, ಹಿರಿಯ ವಿದ್ಯಾರ್ಥಿ ಸಂಘದ ರಾಕೇಶ್ ರಾಜ್ ಹಿರಿಯಡ್ಕ ಸ್ವಾಗತಿಸಿ, ನಿತ್ಯಾನಂದ ಮುಂಡೋಡಿ ವಂದಿಸಿದರು. ಸೋಮಶೇಖರ ನೇರಳ ಕಾರ್ಯಕ್ರಮ ನಿರೂಪಿಸಿದರು.

ಸಂಪಾಜೆಯಿಂದ ಸುಳ್ಯಕ್ಕೆ ಪಾದಯಾತ್ರೆಯಲ್ಲಿ ಬಂದ ದಿವಾಕರ ಪೈ, ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷದ ಮುಖಂಡರುಗಳ ಸ್ವಾಗತ

ತಾಲೂಕು ಕಚೇರಿಯಲ್ಲಿ ಸುಳ್ಯ ತಹಶೀಲ್ದಾರ್ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಕೆ:

ಚುನಾವಣೆಯಲ್ಲಿ ಇ.ವಿ.ಎಂ. ಮತಯಂತ್ರದ ಬದಲು ಬ್ಯಾಲೆಟ್ ಪೇಪರ್ ನೀಡಬೇಕೆಂಬ ಬೇಡಿಕೆಯೊಂದಿಗೆ, ಸಾಮಾಜಿಕ ಕಳಕಳಿಯಿಂದ ರೈತ ಮುಖಂಡ ದಿವಾಕರ ಪೈ ಅವರು ಫೆ.8ರಂದು ಬೆಳಿಗ್ಗೆ ಸಂಪಾಜೆ ಅರಣ್ಯ ತಪಾಸಣಾ ಚೆಕ್ ಪೋಸ್ಟ್ ಬಳಿಯಿಂದ ಸುಳ್ಯದವರೆಗೆ ಪಾದಯಾತ್ರೆ ಮೂಲಕ ಸಂಜೆ 4 ಗಂಟೆಗೆ ಗಾಂಧಿನಗರಕ್ಕೆ ಬರುತ್ತಿದ್ದಂತೆ ಸುಳ್ಯ ಕಾಂಗ್ರೆಸ್ ಪಕ್ಷದ ಮುಖಂಡರು, ಆಮ್ ಆದ್ಮಿ ಪಕ್ಷದ ಮುಖಂಡರು, ಮತ್ತು ಸಮಾನ ಮನಸ್ಕರ ಮುಖಂಡರುಗಳು ಸೇರಿ ಅವರನ್ನು ಸ್ವಾಗತಿಸಿ ಬರಮಾಡಿಕೊಂಡರು.

ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ಎಂ ವೆಂಕಪ್ಪ ಗೌಡ,ಪಿ ಎಸ್ ಗಂಗಾಧರ್,ಕೆ ಗೋಕುಲ್ ದಾಸ್, ನಗರ ಪಂಚಾಯತಿ ಸದಸ್ಯ ಕೆ ಎಸ್ ಉಮ್ಮರ್, ಧರ್ಮಪಾಲ ಕೊಯಿಂಗಾಜೆ,ಸುರೇಶ್ ಅಮೈ, ಗೀತಾ ಕೋಲ್ಚಾರ್, ಸ್ಥಳೀಯರಾದ ಅಬೂಬಕ್ಕರ್ ಸಿದ್ದಿಕ್ ಕಟ್ಟೆಹೌರ್ಸ್, ಆಮ್ ಆದ್ವಿ ಪಕ್ಷದ ಮುಖಂಡ ರಶೀದ್ ಜಟಿಪಳ್ಳ ಮೊದಲಾದವರು ಸೇರಿಕೊಂಡ ಸುಳ್ಯ ತಾಲೂಕು ಕಚೇರಿ ಆವರಣದವರೆಗೆ ಕಾಲ್ನಡಿಗೆಯಲ್ಲಿ ಬಂದು ತಾಲೂಕು ಕಚೇರಿ ಆವರಣದಲ್ಲಿ ಕಿರು ಸಭೆಯನ್ನು ನಡೆಸಿದರು.

ದಿವಾಕರ ಪೈ ಅವರಿಗೆ ಸೇರಿದ

ಮುಖಂಡರುಗಳು ತಂಪು ಪಾನೀಯವನ್ನು ನೀಡಿ, ಅವರು ನಡೆಸಿದ ಬೇಡಿಕೆಯ ಧರಣಿಗೆ ತಾತ್ಕಾಲಿಕ ವಿರಾಮ ನೀಡುವಂತೆ ಕೇಳಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ದಿವಾಕರ್ ಪೈ "ನಾನು ನಡೆಸಿದ ಈ ಹೋರಾಟಕ್ಕೆ ಎಲ್ಲಾ ಪಕ್ಷದ ಮುಖಂಡರುಗಳು, ನಮ್ಮ ಸಂಘಟನೆಯ ಪ್ರತಿಯೊಬ್ಬ ಸದಸ್ಯರು ನನಗೆ ಸಹಕಾರವನ್ನು ನೀಡಿದ್ದು ಮೊದಲಿಗೆ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದು ಹೇಳಿದರು. ಇವಿಎಂ ಯಂತ್ರ ಅದು ಮನುಷ್ಯ ನಿರ್ಮಿತ ಕಂಪ್ಯೂಟರ್ ಮಾದರಿಯ ಯಂತ್ರವಾಗಿದೆ. ಇದರಿಂದ ಯಾವುದೇ ಸಂದರ್ಭದಲ್ಲಿ ತಪ್ಪುಗಳು ಸಂಭವಿಸಬಹುದು. ಅಲ್ಲದೆ ಇತ್ತೀಚಿನ ದಿನಗಳಲ್ಲಿ ಈವಿಎಂ ಯಂತ್ರದ ಬಗ್ಗೆ ನಾನಾ ರೀತಿಯ ಸಂದೇಹಗಳು ಕೇಳಿಬರುತ್ತಿದೆ. ಉನ್ನತ ಹುದ್ದೆಯಲ್ಲಿರುವ ಕೆಲವು ವಕೀಲರುಗಳೇ ಈ ಯಂತ್ರದ ಬಗ್ಗೆ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಬ್ಯಾಲೆಟ್ ಪೇಪರ್ ನಿಂದ ಯಾವುದೇ ಸಮಸ್ಯೆ ಬರಲು ಕಾರಣವಾಗುವುದಿಲ್ಲ. ಆ ವಿಧಾನವನ್ನು ಪರಿಪೂರ್ಣವಾಗಿ ನಂಬುವಂತದ್ದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದೇಶದ ಬಗ್ಗೆ ಚಿಂತೆ ಮಾಡಿ ಈ ರೀತಿಯ ಜಾಗೃತಿ ಅಭಿಯಾನವನ್ನು ಮಾಡಬೇಕೆಂದು ನಿರ್ಧರಿಸಿದ್ದೆ. ಇಂದು ಕಾಲ ಕೂಡಿಬಂದ ಕಾರಣ ಎಲ್ಲರ ಸಹಕಾರದಿಂದ ಈ ಪಾದಯಾತ್ರೆಯನ್ನು ಯಶಸ್ವಿಯಾಗಿಸಲು ಸಾಧ್ಯವಾಯಿತು" ಎಂದು ಹೇಳಿದರು.

ಬಳಿಕ ಇವರ ಅಭಿಯಾನಕ್ಕೆ ಬೆಂಬಲ ವ್ಯಕ್ತಪಡಿಸಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಎಂ ವೆಂಕಪ್ಪಗೌಡ, ಆಮ್ ಆದ್ಮಿ ಪಕ್ಷದ ಮುಖಂಡ ಅಶೋಕ್ ಎಡಮಲೆ, ಸಿಪಿಐಎಂ ಮುಖಂಡ ಕೆ ಪಿ ಜಾನಿ, ನಗರ ಪಂಚಾಯತಿ ಸದಸ್ಯ ಕೆ ಎಸ್ ಉಮ್ಮರ್, ರೈತ ಸಂಘಟನೆಯ ರಾಜ್ಯ ಸಮಿತಿ ಖಾಯಂ ಸದಸ್ಯ ಸನ್ನಿ ಡಿಸೋಜ ಮಾತನಾಡಿ ಚುನಾವಣೆಯಲ್ಲಿ ಬಳಸುವಂತಹ ಇವಿಎಂ ಯಂತ್ರ ತೊಲಗಿ ಬ್ಯಾಲೆಟ್ ಪೇಪರ್ ಬರುವುದು ಅತಿ ಅವಶ್ಯಕವಾಗಿದೆ ಮತ್ತು ಇತ್ತೀಚಿನ ದಿನಗಳಲ್ಲಿ ಇವಿಎಂ ಯಂತ್ರದಿಂದ ಉಂಟಾದ ಲೋಪ ದೋಷಗಳ ನಿರ್ದರ್ಶನಗಳ ಬಗ್ಗೆ ಮಾತನಾಡಿ ದಿವಾಕರ ಪೈ ಯವರು ನಡೆಸಿದ ಹೋರಾಟಕ್ಕೆ ಬೆಂಬಲವನ್ನು ವ್ಯಕ್ತಪಡಿಸಿದರು. ಅಲ್ಲದೆ ಈ ಪಾದಯಾತ್ರೆಗೆ ಪೋಲಿಸ್ ಇಲಾಖೆಯಿಂದ ಸಾರ್ವಜನಿಕರಿಗೆ ಅನುಮತಿ ದೊರೆಯದ ಕಾರಣದಿಂದಾಗಿ ರೈತ ಮುಖಂಡರಾದ ದಿವಾಕರ ಪೈ ಅವರೊಬ್ಬರೇ ಪಾದಯಾತ್ರೆ ಮಾಡಬೇಕಾದ ಸನ್ನಿವೇಶ ನಿರ್ಮಾಣವಾಯಿತು ಎಂದು ಅವರು ಹೇಳಿದರು. ಬಳಿಕ ಅಲ್ಲಿ ಸೇರಿದ್ದ ಎಲ್ಲರೂ ತಹಶೀಲ್ದಾರ್ ರವರ ಬಳಿ ತೆರಳಿ ಅವರ ಮುಖಾಂತರ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರಗತಿಪರ ಚಿಂತಕ ತಿರುಮಲ ಸೋನ, ರೈತ ಸಂಘದ ಅಧ್ಯಕ್ಷ ಲೋಲಜಾಕ್ಷ ಬೂತಕಲ್ಲು, ಮುಖಂಡರುಗಳಾದ ಪಿ.ಎಲ್. ಸುರೇಶ್,ಮಂಜುನಾಥ ಮಡ್ತಿಲ, ಮೋಹನ ಬಾಳೆಕಜೆ, ನೂಜಾಲು ಪದ್ಮನಾಭ ಗೌಡ,ಮಾದವ ಗೌಡ ಸುಳ್ಕೋಡಿ, ಚನ್ನಕೇಶವ ಐವರ್ನಾಡು, ವಸಂತ ಪೆಲ್ತಡ್ಕ, ಗಣೇಶ್ ಸುಳ್ಯ, ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ಮೊಹಮ್ಮದ್ ಕುಂಞಟಿಜಜಜಿಟಿಜಜ ಗೂನಡ್ಕ, ಸಿದ್ದೀಕ್ ಗೂನಡ್ಕ,ಸತ್ಯ ಕುಮಾರ್ ಅಡಿಂಜ, ಸಾಮಾಜಿಕ ಹೋರಾಟಗಾರ ಡಿ ಎಂ ಶಾರಿಕ್ ಸೇರಿದಂತೆ ಇನ್ನಿತರ ಮುಖಂಡರುಗಳು ಉಪಸ್ಥಿತರಿದ್ದರು.

ಫೆ.21ರಿಂದ 23 ಕಂಡೂರು ತರವಾಡು ಕುಟುಂಬ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಧರ್ಮದೈವ ಮತ್ತು ಪರಿವಾರ ದೈವಗಳ ನೇಮೋತ್ಸವ

ಫೆ21ರಂದು ಪೂರ್ವಾಹ್ನ ಗಂಟೆ 8.00 ರಿಂದ ನಾಗದೇವರ ಸನ್ನಿಧಿಯಲ್ಲಿ ಸ್ವಸ್ತಿ ಪುಣ್ಯಾಹವಾಚನ, ಸ್ಥಳಶುದ್ಧಿ, ಕಲಶಪೂಜೆ, ಪ್ರತಿಷ್ಠಾಹೋಮ, ಆಶ್ಲೇಷಬಲಿ, ಕಲಶಾಭಿಷೇಕ, ತಂಬಿಲ, ದೈವಸನ್ನಿಧಿಯಲ್ಲಿ ಸ್ವಸ್ತಿ ಪುಣ್ಯಾಹವಾಚನ, ಸಪ್ತಶುದ್ಧಿ, ಪ್ರಾಸಾದಶುದ್ಧಿ, ಗಣಪತಿ ಹೋಮ, ಪ್ರಸಾದ ವಿತರಣೆ. ಸಾಯಂಕಾಲ ರಾಕ್ಷೆಘ್ನ ಹೋಮ, ವಾಸ್ತು ಹೋಮ, ವಾಸ್ತು ಪೂಜೆ, ದಿಕ್ಪಾಲಕಬಲ, ದುರ್ಗಾನಮಸ್ಕಾರ ಪೂಜೆ, ಸತ್ಯನಾರಾಯಣ ಪೂಜೆ, ದೈವಗಳ ಬಿಂಬಶುದ್ಧಿ, ಬಿಂಬಧಾನ್ಯಾಧಿವಾಸ.

ಫೆ.22 ರಂದು ಪೂರ್ವಾಹ್ನ ಘಂಟೆ 6.00 ರಿಂದ ಕಲಶಪೂಜೆ, ಗಣಪತಿ ಹೋಮ ದಿವಾಗಂಟೆ 11.33ರ ವೃಷಭ ಲಗ್ನದಲ್ಲಿ ದೈವಗಳ ಪ್ರತಿಷ್ಠೆ ಕಲಶಾಭಿಷೇಕ, ದುರ್ಗಾಹೋಮ, ತಂಬಿಲ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ಸಾಯಂಕಾಲ ಘಂಟೆ 4.00 ರಿಂದ ಭಜನಾ ಕಾರ್ಯಕ್ರಮ ಸಾಯಂಕಾಲ ಘಂಟೆ 6.00 ರಿಂದ ದೈವಗಳ ಭಂಡಾರ ತೆಗೆಯುವುದು, ಅನ್ನಸಂತರ್ಪಣೆ, ರಾತ್ರಿ ಕಲ್ಲುರ್ಟಿ, ಕುಟುಂಬ ಪಂಜುರ್ಲಿ, ವರ್ಣಾರ ಪಂಜುರ್ಲಿ ದೈವಗಳ ನೇಮೋತ್ಸವ.

ಫೆ.23ರಂದು ಪೂರ್ವಾಹ್ನ ಘಂಟೆ 7.00ರಿಂದ ಅಣ್ಣಪ್ಪ ಪಂಜುರ್ಲಿ ನೇಮೋತ್ಸವ ಧರ್ಮದೈವ ರುದ್ರಚಾಮುಂಡಿ ನೇಮೋತ್ಸವ ಗುಳಿಗ ನೇಮೋತ್ಸವ 12.30 ರಿಂದ ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ ಎಂದು ಕಂಡೂರು ಕುಟುಂಬಸ್ಥರು ತಿಳಿಸಿದ್ದಾರೆ.

ಕಲ್ಲುಗುಂಡಿ: ಕಡೆಪಾಲದಲ್ಲಿ ಕಾರು – ಬೈಕ್ ಅಪಘಾತ

ಬೈಕ್ ಹಾಗೂ ಕಾರಿನ ನಡುವೆ ಅಪಘಾತ ಸಂಭವಿಸಿ, ಬೈಕ್ ಸವಾರ ಗಾಯಗೊಂಡ ಘಟನೆ ದ.ಕ. ಸಂಪಾಜೆ ಗ್ರಾಮದ ಕಡೆಪಾಲ ಎಂಬಲ್ಲಿ ಫೆ13ರಂದು ಅಪರಾಹ್ನ ಸಂಭವಿಸಿದೆ.

ಕಲ್ಲುಗುಂಡಿ ಪೂರ್ಣಿಮಾ ಟೆಕ್ಸ್‌ಟೈಲ್ಸ್ ಮಾಲಕ ಬಿ.ಆರ್. ಪದ್ಮಯ್ಯ ಅವರು ಸುಳ್ಯದಿಂದ ಕಲ್ಲುಗುಂಡಿಗೆ ಬರುತ್ತಿದ್ದ ವೇಳೆ ಕಡೆಪಾಲ ಎಂಬಲ್ಲಿ ಕಲ್ಲುಗುಂಡಿಯಿಂದ ಸುಳ್ಯಕ್ಕೆ ತೆರಳುತ್ತಿದ್ದ ಬೈಕ್ ಸವಾರ ಪೆರಾಜೆ ಗ್ರಾಮದ ಗಂಗಾಧರ ಪೆರಂಗಜೆ, ಕಲ್ಲುಗುಂಡಿಯ ಯುವಕ ಚಲಾಯಿಸುತ್ತಿದ್ದ ಬೈಕ್ ಢಿಕ್ಕಿ ಹೊಡೆದಿದ್ದು, ಬೈಕ್ ಸವಾರನ ಹಣೆಗೆ ಗಾಯಗೊಂಡಿದ್ದು, ಅವರನ್ನು ಸ್ಥಳೀಯರು ಸುಳ್ಯ ಆಸ್ಪತ್ರೆಗೆ ದಾಖಲಿಸಿದ್ದಾರೆ ತಿಳಿದುಬಂದಿದೆ.

ವರದಿ, ಕಥೆ, ಜಾಹೀರಾತು, ಕವನ ಲೇಖನಗಳನ್ನು ಕಳುಹಿಸಿಕೊಡಿ WWW.amara-suddi@gmail.com

ಬಾಕಿಲ: ಸ್ಕೂಟಿ–ಬಸ್ ಅಪಘಾತ – ತಂದೆ ಮೃತ್ಯು – ಮಗಳ ಕಾಲು ಜಖಂ ಮೃತಪಟ್ಟಾಗ ಪುತ್ತೂರಿನ ಸ್ಮಶಾನದಲ್ಲಿ ಅಂತ್ಯಸಂಸ್ಕಾರ ನಡೆಸುವಂತೆ ಬರೆದಿಟ್ಟಿದ್ದ ಡೈರಿ ಪತ್ತೆ

ಗುತ್ತಿಗಾರು ಬಾಕಿಲ ಎಂಬಲ್ಲಿ ಸುಳ್ಯದಿಂದ ಗುತ್ತಿಗಾರು ಕಡೆ ಬರುತ್ತಿದ್ದ ಸ್ಕೂಟಿಗೆ ಎದುರಿನಿಂದ ಬಂದ ಕೆ.ಎಸ್. ಆರ್.ಟಿ.ಸಿ ಬಸ್ ಗುದ್ದಿದ ಪರಿಣಾಮ ಸ್ಕೂಟಿ ಸವಾರ ಮೃತಪಟ್ಟ ಘಟನೆ ವರದಿಯಾಗಿದೆ.

ನಡುಗಲ್ಲು ನಿವಾಸಿ ಶಿವರಾಮ ಗೌಡ (70 ವ) ಮೃತಪಟ್ಟ ದುರ್ದೈವಿ. ಹಿಂಬದಿ ಕುಳಿದ್ದ ಮಗಳು ನವ್ಯಶ್ರೀ ಯ ಕಾಲಿಗೆ ಗಂಭೀರ ಗಾಯಗಳಾಗಿದ್ದು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ತಿಳಿದುಬಂದಿದೆ.

ಪೆರಾಜೆ ದೇವಸ್ಥಾನಕ್ಕೆ ತೆರಳಿ ಹಿಂತಿರುಗುತ್ತಿದ್ದ ವೇಳೆ ಈ ಘಟನೆ ನಡೆದಿದೆ. ಮೃತರು ಪತ್ನಿ ದೇವಕಿ, ಪುತ್ರರಾದ ಉಲ್ಲಾಸ್, ಹಿತೇಶ್, ಪುತ್ರಿಯರಾದ ಕಾವ್ಯಶ್ರೀ, ಮಧುಶ್ರೀ, ಧನುಶ್ರೀ, ಸ್ವಾತಿ ಹಾಗೂ ನವ್ಯಶ್ರೀ ಯನ್ನು ಅಗಲಿದ್ದಾರೆ.

ಶಿವರಾಮ ಗೌಡರು ಮೃತಪಟ್ಟಿದ್ದರಿಂದ ಅವರ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾಗ ಖಾಸಗಿ ಡೈರಿ ಪತ್ತೆಯಾಗಿತ್ತು. ಅದನ್ನು ತೆರೆದು ನೋಡಿದಾಗ 2015 ರಲ್ಲಿ ಬರೆದಿಟ್ಟಿದ್ದ ಮಹತ್ವದ ವಿಚಾರವೊಂದು ಬೆಳಕಿಗೆ ಬಂದಿತ್ತು. ತಾನು ಮೃತಪಟ್ಟರೆ ತನ್ನ ಅಂತ್ಯಸಂಸ್ಕಾರವನ್ನು ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಕ್ಷೇತ್ರದಲ್ಲಿರುವ ಮಡಿವಾಳಕಟ್ಟೆ ಸ್ಮಶಾನದಲ್ಲಿ ನೆರವೇರಿಸುವಂತೆ ಮತ್ತು ಚಿತಾ ಭಸ್ಮವನ್ನು ನೇತ್ರಾವತಿ, ಕಾವೇರಿ, ಗಂಗಾ ನದಿಯಲ್ಲಿ ಬಿಡುವಂತೆಯೂ,

ಸ್ವಲ್ಪ ಚಿತಾ ಭಸ್ಮವನ್ನು ಮನೆಯ ಬಳಿ ಗುಂಡಿ ತೆಗೆದು ಹಾಕಿ ಅದರ ಮೇಲೆ ಕಲ್ಪವೃಕ್ಷವನ್ನು ನೆಡುಬೇಕು, ಅಲ್ಲದೆ ಪ್ರತಿ ವರ್ಷ ತನ್ನ ನಿಧನದ ದಿನದಂದು ಅನ್ನಸಂತರ್ಪಣೆ ನಡೆಸಬೇಕೆಂದು ಅಂತಿಮ ಇಚ್ಛೆಯನ್ನು ಬರೆದಿಟ್ಟಿದ್ದರು. ಮೃತರ ಇಚ್ಛೆಯಂತೆ ಪುತ್ತೂರಿನ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲು ಮನೆಯವರು ತೀರ್ಮಾನಿಸಿದ್ದಾರೆ ಎಂದು ತಿಳಿದುಬಂದಿದೆ.

ಸಂಪಾಜೆ: ಕಳ್ಳತನ, ನಗದು– ಚಿನ್ನಾಭರಣ ದೋಚಿ ಪರಾರಿ!

ಮನೆಯಲ್ಲಿ ಯಾರೂ ಇಲ್ಲದ ವೇಳೆ ಮನೆಗೆ ನುಗ್ಗಿದ ಕಳ್ಳರ ಗುಂಪು ಮನೆಯಲ್ಲಿದ್ದ ಚಿನ್ನಾಭರಣ, ನಗದು ದೋಚಿ ಪರಾರಿಯಾದ ಘಟನೆ ಫೆ.8 ರಂದು ಕೊಡಗು ಸಂಪಾಜೆಯ ಬೈಲಿನ ಕನ್ಯಾನ ವಿಜಯ ಕುಮಾರ್ ಅವರ ಮನೆಯಲ್ಲಿ ನಡೆದಿದೆ.

ಬೆಳಿಗ್ಗೆ ಕಲ್ಲುಗುಂಡಿಯ ತಮ್ಮ ಅಂಗಡಿಗೆ ಹೋಗಿ ಸಂಜೆ ವೇಳೆ ಮನೆಗೆ ಹಿಂದಿರುಗಿ ನೋಡಿದಾಗ ಬಟ್ಟೆ ಗಳು ಚೆಲ್ಲಾಪಿಲ್ಲಿಯಾಗಿತ್ತು. ಕೂಡಲೇ ಸ್ಥಳೀಯರಿಗೆ ವಿಷಯ ತಿಳಿಸಲಾಗಿದ್ದು, ಸಂಪಾಜೆ ಪೊಲೀಸರಿಗೆ ಮಾಹಿತಿ ತಿಳಿಸಲಾಗಿದೆ. 40 ಗ್ರಾಂ ಚಿನ್ನಾಭರಣ ಮತ್ತು 20ಸಾವಿರ ಮೌಲ್ಯದಹಣ , ಉಂಗುರ ಕಳ್ಳತನವಾಗಿದೆ. ಸ್ಥಳಕ್ಕೆ ಮಡಿಕೇರಿ ಪೊಲೀಸ್ ಇನ್ಸ್ ಪೆಕ್ಟರ್ ಉಮೇಶ್ ಉಪ್ಪಳಿಕೆ, ಕ್ರೈಂ ಶ್ರೀನಿವಾಸಲು, ಸಿಬ್

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಸುಳ್ಯ ಸಹಾಯಕ ವ್ಯವಸ್ಥಾಪಕರಿಗೆ ಕಲ್ಲಡ್ಕ ಶಾಖೆಗೆ ಪದೋನ್ನತಿ

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಸುಳ್ಯ ಸಹಾಯಕ ವ್ಯವಸ್ಥಾಪಕರಾದ ಮಂಜು ಕುಮಾರ್ ಅವರಿಗೆ ಕಲ್ಲಡ್ಕ ಶಾಖೆಗೆ ವ್ಯವಸ್ಥಾಪಕರಾಗಿ ಪದೋನ್ನತಿ ಅಭಿನಂದನಾ ಕಾರ್ಯಕ್ರಮ ಸುಳ್ಯ ಶಾಖೆಯಲ್ಲಿ ನಡೆಯಿತು. ಸುಳ್ಯ ಬ್ಯಾಂಕ್ ವ್ಯವಸ್ಥಾಪಕರಾದ ಅರುಣ್ ಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಶುಭಾಶಯ ಕೋರಿದರು. ಕಾರ್ಯಕ್ರಮದ ಸ್ವಾಗತ & ಧನ್ಯವಾದ ಸೆಲ್ಕೋ ಸುಳ್ಯ ಶಾಖೆಯ ವ್ಯವಸ್ಥಾಪಕರಾದ ಆಶಿಕ್ ಅವರು ನೆರವೇರಿಸಿದರು. ಈ ಸಂದರ್ಭ ಗ್ರಾಮೀಣ ಬ್ಯಾಂಕ್ ಸಹದ್ಯೋಗಿಗಳು, ಸೆಲ್ಕೋ ಸೋಲರ್ ಸಹದ್ಯೋಗಿಗಳು, ಪ್ರೊಫೈಲ್ ಸ್ಟುಡಿಯೋ ರಮೇಶ್ ,ಚಿಕ್ಕೋ ಅಶೋಕ್ ಸುಗಮ ಮೋಟಾರ್ ಡ್ರೈವಿಂಗ್ ಸ್ಕೂಲ್ ಮಾಲಕರಾದ ಜಯಲಕ್ಷಿ ಅರಂಬೂರು ಗ್ರಾಹಕರಾದ ಚಿಕ್ಕಯ್ಯ ಬೆಟ್ಟಂಪಾಡಿ ಉಪಸ್ಥಿತರಿದ್ದರು.

ತಾಲೂಕು ಮಟ್ಟದ ಹಸ್ತಪತ್ರಿಕೆ ಸ್ಪರ್ಧೆ

ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಸುಳ್ಯ ತಾಲೂಕಿನ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳ ಹಸ್ತ ಪತ್ರಿಕೆ ಸ್ಪರ್ಧೆ ನಡೆಸಲಾಯಿತು.

ಸುಳ್ಯದ ಸಮೂಹ ಸಂಪನ್ಮೂಲ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ ಪೇರಾಲು ಮಾತನಾಡಿ "ವಿದ್ಯಾರ್ಥಿಗಳಲ್ಲಿ ಸೃಜನಶೀಲ ವ್ಯಕ್ತಿತ್ವ ವನ್ನು ರೂಪಿಸುವುದು ಸಾಹಿತ್ಯ ಪರಿಷತ್ತಿನ ಮುಖ್ಯ ಉದ್ದೇಶ.ಹಸ್ತ ಪತ್ರಿಕೆ ಸ್ಪರ್ಧೆ ಕನ್ನಡ ಸಾಹಿತ್ಯದ ಕುರಿತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಶಿಕ್ಷಕರಿಗೆ –ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ" ಎಂದರು .

ವೇದಿಕೆಯಲ್ಲಿ ಸುಳ್ಯ ತಾಲೂಕು ಬಹುಮಾನ ವಿತರಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ರಮೇಶ್ .ಬಿ.ಇ. "ವಿದ್ಯಾರ್ಥಿಗಳಲ್ಲಿ ಮಾತೃಭಾಷೆಯ ಮೇಲೆ ಒಲವು ಮೂಡಿಸುವುದು ಶಿಕ್ಷಕರ ಜವಾಬ್ದಾರಿಯಾಗಿದೆ ಸ್ಪಷ್ಟ ಓದು ಹಾಗೂ ಬರವಣಿಗೆ ತಿಳಿಯದ ವಿದ್ಯಾರ್ಥಿ ಶಿಕ್ಷಣದಲ್ಲಿ ಹಿಂದುಳಿಯುತ್ತಾನೆ. ಶಾಲಾ ಅವಧಿಯಲ್ಲಿ ನಿರ್ದಿಷ್ಟ ಅವಧಿಯನ್ನು ವಿದ್ಯಾರ್ಥಿಗಳ ಬರವಣಿಗೆಯ ಸುಧಾರಣೆಗೆ ಮೀಸಲಿಡಬೇಕು" ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಕ್ಷೇತ್ರ ಸಮನ್ವಯಾಧಿಕಾರಿ ಶೀತಲ್ ಮಾತನಾಡಿ "ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆ –ಬರಹದ ಸುಧಾರಣೆಗೆ ಸಾಹಿತ್ಯ ಪರಿಷತ್ತಿನ ಕಾರ್ಯಗಳಿಗೆ ಶಿಕ್ಷಣ ಇಲಾಖೆ ಸಹಕರಿಸುತ್ತದೆ" ಎಂದರು.

ಸಭಾಧ್ಯಕ್ಷತೆ ವಹಿಸಿದ್ದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ ಪೇರಾಲು ಮಾತನಾಡಿ "ವಿದ್ಯಾರ್ಥಿಗಳಲ್ಲಿ ಸೃಜನಶೀಲ ವ್ಯಕ್ತಿತ್ವ ವನ್ನು ರೂಪಿಸುವುದು ಸಾಹಿತ್ಯ ಪರಿಷತ್ತಿನ ಮುಖ್ಯ ಉದ್ದೇಶ.ಹಸ್ತ ಪತ್ರಿಕೆ ಸ್ಪರ್ಧೆ ಕನ್ನಡ ಸಾಹಿತ್ಯದ ಕುರಿತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಶಿಕ್ಷಕರಿಗೆ –ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ" ಎಂದರು .

ವೇದಿಕೆಯಲ್ಲಿ ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ತೇಜಸ್ವಿ ಕಡಪಳ, ಶ್ರೀಮತಿ ಚಂದ್ರಮತಿ, ಕೋಶಾಧಿಕಾರಿ ದಯಾನಂದ ಆಳ್ಳ, ಜಿಲ್ಲಾ ಸಾಹಿತ್ಯ ಪರಿಷತ್ತಿನ ಪ್ರತಿನಿಧಿ ರಾಮಚಂದ್ರ ಪಲ್ಲತಡ್ಕ ಉಪಸ್ಥಿತರಿದ್ದರು.

ತೇಜಸ್ವಿ ಕಡಪಳ. ಪ್ರಾಸ್ತಾವಿಕ ಮಾತುಗಳನ್ನಾಡಿ ಅತಿಥಿಗಳನ್ನು ಸ್ವಾಗತಿಸಿದರು.ಸಂಕೀರ್ಣ .ಎ.ಎಲ್ ಧನ್ಯವಾದಗೈದರು. ಚಂದ್ರಮತಿ ಬಹುಮಾನ ವಿಜೇತರ ಪಟ್ಟಿ ವಾಚಿಸಿದರು. ಮಮತಾ ರವೀಶ್ ಕಾರ್ಯಕ್ರಮ ನಿರೂಪಿಸಿದರು. ಹಸ್ತಪತ್ರಿಕೆ ಸ್ಪರ್ಧೆಯಲ್ಲಿ 31 ಪ್ರಾಥಮಿಕ ಹಾಗೂ 9 ಪ್ರೌಢಶಾಲೆಗಳು ಭಾಗವಹಿಸಿದ್ದವು.

ವಿಜೇತರ ಪಟ್ಟಿ: ಪ್ರಾಥಮಿಕ ವಿಭಾಗ–ಪ್ರಥಮ, 1.ಸ ಉ. ಹಿ.ಪ್ರಾ ಶಾಲೆ ಶಾಂತಿನಗರ, 2. ಸ.ಕಿ.ಪ್ರಾ ಶಾಲೆ ಪೈಂಬೆಚಾಲು, **ದ್ವಿತಿಯ;** ಸ.ಹಿ.ಪ್ರಾ ಶಾಲೆ ಕೋಲ್ಚಾರು, **ತೃತೀಯ;** ಸ.ಕಿ.ಪ್ರಾ ಶಾಲೆ ಪುತ್ಯ **ಪ್ರೌಢಶಾಲಾ ವಿಭಾಗ;** ಪ್ರಥಮ–ಕರ್ನಾಟಕ ಪಬ್ಲಿಕ್ ಸ್ಕೂಲ್ ಬೆಳ್ಳಾರೆ (ಪ್ರೌಢಶಾಲಾ ವಿಭಾಗ), ದ್ವಿತಿಯ–ಸರಕಾರಿ ಪ್ರೌಢಶಾಲೆ ಮರ್ಕಂಜ, ತೃತೀಯ; ಸರಕಾರಿ ಪ ಪೂ ಕಾಲೇಜು ಐವರ್ನಾಡು (ಪ್ರೌಢಶಾಲಾ ವಿಭಾಗ)

ಪಂಜ ಗ್ರಾಮ ಪಂಚಾಯತ್

ಸುಳ್ಯ ತಾಲೂಕು, ದಕ - 574232. ಫೋನ್: 08257- 279409

2023–24ನೇ ಸಾಲಿನ ಪ್ರಥಮ ಹಂತದ

ವಾರ್ಡುಸಭೆ ಮತ್ತು ಗ್ರಾಮಸಭೆ

ಪಂಜ ಗ್ರಾಮ ಪಂಚಾಯತು ವ್ಯಾಪ್ತಿಯ ಐವತ್ತೊಕ್ಲು ಮತ್ತು ಕೂಟ್ಕುಂಜ ಗ್ರಾಮಗಳ 2023–24ನೇ ಸಾಲಿನ ಪ್ರಥಮ ಹಂತದ ವಾರ್ಡುಸಭೆ ಮತ್ತು ಗ್ರಾಮ ಸಭೆಯನ್ನು ಈ ಕೆಳಗೆ ನಮೂದಿಸಿದ ದಿನಾಂಕ ಸಮಯ ಮತ್ತು ಸ್ಥಳಗಳಲ್ಲಿ ಏರ್ಪಡಿಸಲಾಗಿದೆ. ಈ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಭಾಗವಹಿಸಿ ಗ್ರಾಮೀಣ ಅಭಿವೃದ್ಧಿ ಬಗ್ಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಬೇಕಾಗಿ ಕೋರಲಾಗಿದೆ.

ವಾರ್ಡುಸಭೆಗಳ ವೇಳಾಪಟ್ಟಿ

ಗ್ರಾಮ	ವಾರ್ಡುಸಭೆ	ದಿನಾಂಕ ಮತ್ತು ಸಮಯ	ಸ್ಥಳ
ಕೂಟ್ಕುಂಜ	1	17–2–2024 ಶನಿವಾರ ಪೂ.ಗಂ 10–00ಕ್ಕೆ	ನಾಗತೀರ್ಥ ಅಂಗನವಾಡಿ ಕೇಂದ್ರ
ಕೂಟ್ಕುಂಜ	II	17–2–2024 ಶನಿವಾರ ಅ.ಗಂ 12–00ಕ್ಕೆ	ಅಡ್ಡತೋಡು ಅಂಗನವಾಡಿ ಕೇಂದ್ರ
ಐವತ್ತೊಕ್ಲು	1	19–2–2024 ಸೋಮವಾರ ಪೂ.ಗಂ 10–30ಕ್ಕೆ	ದ.ಕ.ಜಿ.ಪ.ಹಿ.ಪ್ರಾ ಶಾಲೆ ಕರಿಕ್ಕಳ
ಐವತ್ತೊಕ್ಲು	II	19–2–2024 ಸೋಮವಾರ ಅ.ಗಂ 2–00ಕ್ಕೆ	ದ.ಕ.ಜಿ.ಪ.ಕ.ಪ್ರಾ ಶಾಲೆ ಪಾಂಡಿಗದ್ದೆ
ಐವತ್ತೊಕ್ಲು	III	19–2–2024 ಸೋಮವಾರ ಅ.ಗಂ 4–00ಕ್ಕೆ	ಗ್ರಾ.ಪಂ ಕಚೇರಿ ಸಭಾಂಗಣ

ಗ್ರಾಮ ಸಭೆ

ದಿನಾಂಕ	ಗ್ರಾಮ	ಸಮಯ	ಸ್ಥಳ
21–02–2024 ಬುಧವಾರ	ಐವತ್ತೊಕ್ಲು ಕೂಟ್ಕುಂಜ	ಪೂ.ಗಂ 10.30ಕ್ಕೆ	ಪಂಜ ಗ್ರಾಮ ಪಂಚಾಯತ್, ಕಚೇರಿ ಸಭಾಭವನ

ನೋಡೆಲ್ ಅಧಿಕಾರಿ: ಸಹಾಯಕ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಸುಳ್ಯ

ಶ್ರೀಮತಿ ವಿಜಯಲಕ್ಷ್ಮೀ ಅಧ್ಯಕ್ಷರು | **ಶ್ರೀ ನಾರಾಯಣ ಎನ್** ಉಪಾಧ್ಯಕ್ಷರು | **ಶ್ರೀ ಗೋಪಾಲಕೃಷ್ಣ ಜಯಂತ್ ಯು.ಬಿ** ಕಾರ್ಯದರ್ಶಿ | ಪಂ.ಅ. ಅಧಿಕಾರಿ

ಹಾಗೂ ಸರ್ವಸದಸ್ಯರು ಗ್ರಾಮ ಪಂಚಾಯತ್ ಪಂಜ

ವಿ.ಸೂ: * 2023–24ನೇ ಸಾಲಿನಲ್ಲಿ ಗ್ರಾಮಸ್ಥರು ಪಂಚಾಯತ್‌ಗೆ ಸಲ್ಲಿಸಬೇಕಾದ ಕಟ್ಟಡ ತೆರಿಗೆ ನೀರಿನ ದರವನ್ನು ಕೂಡಲೇ ಪಾವತಿ ಮಾಡಿ ಗ್ರಾಮದ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ
* ವಿವಿಧ ಯೋಜನೆಗಳಿಗೆ ಅರ್ಹ ಫಲಾನುಭವಿಗಳಿಂದ ಗ್ರಾಮಸಭೆಯಲ್ಲಿ ಅರ್ಜಿ ಸ್ವೀಕರಿಸಲಾಗುವುದು

ಸುಬ್ರಹ್ಮಣ್ಯ ಗ್ರಾ.ಪಂ. ಮತ್ತು ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಆಡಳಿತ ವೈಫಲ್ಯ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ಯೇನೆಕಲ್ಲಿನಲ್ಲಿ ಜಾಥಾಕ್ಕೆ ಅಶೋಕ್ ನೆಕ್ರಾಜೆಯವರಿಂದ ಚಾಲನೆ

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಮತ್ತು ಗ್ರಾಮ ಪಂಚಾಯತ್ ಆಡಳಿತದಲ್ಲಿ ವಿಫಲವಾಗಿದೆಯೆಂದು ಆರೋಪಿಸಿ, ಕಾಂಗ್ರೆಸ್ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಫೆ.12ರಂದು ನಡೆಯುತ್ತಿದ್ದು, ಪ್ರತಿಭಟನಾ ಮೆರವಣಿಗೆಗೆ ಸುಬ್ರಹ್ಮಣ್ಯ ತಾ.ಪಂ. ಕ್ಷೇತ್ರದ ನಿಕಟಪೂರ್ವ ಸದಸ್ಯ ಅಶೋಕ್ ನೆಕ್ರಾಜೆ ಯೇನೆಕಲ್ಲಿನಲ್ಲಿ ಚಾಲನೆ ನೀಡಿದರು.

ಪ್ರತಿಭಟನಾ ಜಾಥಾ ಸುಬ್ರಹ್ಮಣ್ಯದ ತನಕ ನಡೆಯಲಿದ್ದು, ಕಾಂಗ್ರೆಸ್ ಸುಬ್ರಹ್ಮಣ್ಯ ಗ್ರಾಮ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ, ಶಿವರಾಮ ರೈ, ವಿಮಲಾ ರಂಗಯ್ಯ, ಬಾಲಕೃಷ್ಣ ಮರೀಲ್, ರಾಮಯ್ಯ ಎಂಎಂ, ಕಾರ್ಯಪ್ಪ ಗೌಡ, ಅಚ್ಚುತ ಆಲ್ಕಬೆ, ಚಂದ್ರಕಾಂತ ಬಳ್ಳ, ಲೋಲಾಕ್ಷ ಕೈಕಂಬ, ಸತೀಶ್ ಕೂಜುಗೋಡು, ಪವನ್ ಎಂ.ಡಿ, ಮನೋಹರ ನಾಳ, ಸುಧೀರ್ ತೋಟ, ಭಾರತಿ, ಸಂತೋಷ್ ರೈ ಪಲ್ಲತ್ತಡ್ಕ, ಶ್ರೀಮತಿ ಸೌಮ್ಯ, ರವೀಂದ್ರ ಕುಮಾರ್ ರುದ್ರಪಾದ, ಗೋಪಾಲ್ ಎಣ್ಣೆಮಜಲು, ಮೂರ್ತಿ ಭಟ್, ಶೇಷ ಕುಮಾರ್, ದಿನೇಶ್ ಎಣ್ಣೆಮಜಲು, ಮಾಧವ ಡಿ, ಗುಣವರ್ಧನ, ಮೋಹನ್ ದಾಸ್ ರೈ ಸೇರಿದಂತೆ ಅನೇಕ ಕಾಂಗ್ರೆಸ್ ಕಾರ್ಯಕರ್ತರು ಜಾಥಾದಲ್ಲಿ ಭಾಗವಹಿಸಿದ್ದರು.

ಅರಂತೋಡು; ಮತದಾನ ಬಹಿಷ್ಕಾರ ಬ್ಯಾನರ್ ಅಳವಡಿಕೆ

ದೇಶದ ಸಾರ್ವತ್ರಿಕ ಚುನಾವಣೆಯು ಸಮೀಪಿಸುತ್ತಿದ್ದು, ಅರಂತೋಡು ಗ್ರಾಮದ ಅಂಗಡಿಮಜಲು ಎಂಬಲ್ಲಿ ಮತದಾನ ಬಹಿಷ್ಕಾರದ ಬ್ಯಾನರ್ ಅಳವಡಿಸಲಾಗಿದೆ.

ಬಹು ವರ್ಷಗಳ ಬೇಡಿಕೆಯಾದ ಅರಂತೋಡಿನಿಂದ ಅಂಗಡಿಮಜಲು – ಪಾರೆಮಜಲು, ಮಂಟಮೆಗುಡ್ಡೆ ಮೂಲಕ ಮರ್ಕಂಜಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಹೊಂಡ ಗುಂಡಿಗಳಿಂದ ಕೂಡಿದ್ದು, ಈ ರಸ್ತೆಯಲ್ಲಿ ಹೋಗಲಾಗದ ಪರಿಸ್ಥಿತಿ ನಿರ್ಮಾಣಗೊಂಡಿದ್ದು, ಅಭಿವೃದ್ಧಿ ಕೆಲಸ ಇನ್ನೂ ಆರಂಭಗೊಂಡಿಲ್ಲ. ಇದೀಗ ದೇಶದ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಈ ಪರಿಸರದಲ್ಲಿ ಮತದಾನ ಬಹಿಷ್ಕಾರದ ಬ್ಯಾನರ್ ಹಾಕಲಾಗಿದೆ ಎಂದು ತಿಳಿದುಬಂದಿದೆ.

ಶಾಂತಿನಗರ ಮುತ್ತಪ್ಪ ತಿರುವಪ್ಪ ದೈವಸ್ಥಾನದ ನೇಮೋತ್ಸವ ಆಮಂತ್ರಣ ಪತ್ರ ಬಿಡುಗಡೆ

ಶಾಂತಿನಗರ ಮುತ್ತಪ್ಪ ತಿರುವಪ್ಪ ದೈವಸ್ಥಾನದ ನೇಮೋತ್ಸವದ ಆಮಂತ್ರಣ ಪತ್ರವು ಫೆ.8ರಂದು ಶ್ರೀ ಮುತ್ತಪ್ಪ ತಿರುವಪ್ಪ ದೈವಸ್ಥಾನದಲ್ಲಿ ಬಿಡುಗಡೆ ಮಾಡಲಾಯಿತು.

ಮಾ.9 ಮತ್ತು 10 ರಂದು ಸುಳ್ಯ ಕಸಬಾದ ಶಾಂತಿನಗರ ಶ್ರೀ ಮುತ್ತಪ್ಪ ತಿರುವಪ್ಪ ದೈವಸ್ಥಾನ (ಮಡಪ್ಪುರ) ದ ನೇಮೋತ್ಸವವು ನಡೆಯಲಿದೆ. ದೈವಸ್ಥಾನದ ಮೊಕ್ತೇಸರ ರಾಮಕೃಷ್ಣ ಎಸ್.ಎನ್,ಮುತ್ತಪ್ಪ ದೈವರಾಧನಾ ಸಮಿತಿ ಅಧ್ಯಕ್ಷಪಿ. ಎಂ. ಮಧುಸೂದನ ಹಾಗೂ ಸದಸ್ಯರು, ಉತ್ಸವ ಸಮಿತಿ ಅಧ್ಯಕ್ಷ ನವೀನ್ ನಾಯಕ್ ಹಾಗೂ ಸದಸ್ಯರು ಮತ್ತು ಸ್ಥಳೀಯ ಭಕ್ತಾದಿಗಳು ಉಪಸ್ಥಿತರಿದ್ದರು.

ಕೆ.ಪಿ.ಎಸ್ ಗಾಂಧಿನಗರ ಕಾಲೇಜ್ ವಿಭಾಗದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ

ಕೆ.ಪಿ.ಎಸ್ ಗಾಂಧಿನಗರ ಕಾಲೇಜ್ ವಿಭಾಗದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಮತ್ತು ಬಹುಮಾನ ವಿತರಣ ಕಾರ್ಯಕ್ರಮ ನಡೆಯಿತು.

ಕೆ.ಪಿ.ಎಸ್ ಕಾಲೇಜ್ ವಿಭಾಗದ ಪ್ರಾಂಶುಪಾಲರಾದ ಸಮದ್ ಹಾಗು ಕಾರ್ಯಾಧ್ಯಕ್ಷ ಚಿದಾನಂದ ಕಾರ್ಯತೋಡಿ ನೇತೃತ್ವದಲ್ಲಿ ಬಹಳ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮಕ್ಕೆ ಡಿ.ಡಿ.ಪಿ.ಯು. ಸಿ.ಡಿ ಜಯಣ್ಣ ಸರ್ ಆಗಮಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಮತ್ತು ಅತಿಥಿಗಳಾಗಿ ರಂಗ ಕಲಾವಿದ ಸೀನಣ್ಣ ನಾಡೋಳಿ, ನಗರ ಪಂಚಾಯತ್ ಸದಸ್ಯರಾದ ಶರೀಫ್ ಕಂಠಿ, ಪ್ರವೀತ ಪ್ರಶಾಂತ್, ಅರುಣ್ ಕುಮಾರ ಶಿಕ್ಷಕರುಗಳಾದ ಜೊತಿ ಲಕ್ಷ್ಮಿ, ಪದ್ಮನಾಭ ಹಾಗೂ ಕೆ.ಪಿ.ಎಸ್ ಸಂಸ್ಥೆಯ ಶಿಕ್ಷಕರುಗಳು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಸುಳ್ಯ ಶ್ರೀರಾಮ ಮಂದಿರ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಹಾಗೂ ಭಜನೋತ್ಸವ

ಸುಳ್ಯ ಶ್ರೀರಾಮ ಮಂದಿರ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಹಾಗೂ ಭಜನೋತ್ಸವವು ಫೆ. 25 ಆದಿತ್ಯವಾರದಿಂದ ಫೆ. 28 ಬುಧವಾರ ತನಕ ನಡೆಯಲಿದೆ. ಫೆ. 25ರಿಂದ ಫೆ. 28ರ ತನಕ ಬ್ರಹ್ಮಶ್ರೀ ವೇದಮೂರ್ತಿ ಮಧೂರು ರಾಜೇಶ ಸರಳಾಯ ರವರ ನೇತೃತ್ವದಲ್ಲಿ ಶ್ರೀ ಮಹಾಗಣಪತಿ, ಶ್ರೀ ಮೂಕಾಂಬಿಕಾ, ಶ್ರೀ ಸೀತಾ ಲಕ್ಷ್ಮಣ ಆಂಜನೇಯ ಸಮೇತ ಶ್ರೀರಾಮ ದೇವರ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಹಾಗೂ ಭಜನೋತ್ಸವ ವಿಜೃಂಭಣೆಯಿಂದ ಜರುಗಲಿರುವುದು. ಫೆ 25 ಆದಿತ್ಯವಾರ ಬೆಳಗ್ಗೆ ಗಣಪತಿ ಹವನ, ಉಗ್ರಾಣ ತುಂಬಿಸುವುದು, ಶ್ರೀ ಚೆನ್ನಕೇಶವ ದೇವಸ್ಥಾನದ ಮುಂಭಾಗದಿಂದ 'ಹಸಿರುವಾಣಿ ಮೆರವಣಿಗೆ' ಕ್ಷೇತ್ರದಲ್ಲಿ – ಪುಣ್ಯಾಹ, ಜೀವೋದ್ವಾಸನೆ, ಬಾಲಾಲಯದಲ್ಲಿ ದೇವರ ಸ್ಥಾಪನೆ, ಜೀವ ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ.

ಸಂಜೆ ಗಂಟೆ 5:00ರಿಂದ ಪೂರ್ಣಕುಂಭ ಸ್ವಾಗತದೊಂದಿಗೆ ತಂತ್ರಿಗಳ ಆಗಮನ ತೋರಣ ಮುಹೂರ್ತ, ಸಾಮೂಹಿಕ ಪ್ರಾರ್ಥನೆ, ಸ್ಥಳಶುದ್ಧಿ, ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಬಲಿ, ದಿಕ್ಪಾಲಕ ಬಲಿ, ಪ್ರಾಯಶ್ಚಿತ ಹೋಮ, ಜೀವೋದ್ವಾಸನೆ, ಶಯ್ಯಾಗಮನ, ನೇತ್ರೋನ್ಮಿಲನ, ಶಯ್ಯಾಪೂಜೆ, ಶಯನ, ಅನ್ನಸಂತರ್ಪಣೆ ನಡೆಯಲಿದೆ. ಸಂಜೆ ಗಂಟೆ 6:00ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ, 7:00ರಿಂದ ಸಾಂಸ್ಕೃತಿಕ ಕಾರ್ಯಕ್ರಮ ಮಧ್ವಾಧೀಶ ವಿಠಲದಾಸ ನಾಮಾಂಕಿತ ಶ್ರೀ ರಾಮಕೃಷ್ಣ ಕಾಟುಕುಕ್ಕೆ ಮತ್ತು ಬಳಗದವರಿಂದ 'ದಾಸ ಭಕ್ತಿಗಾನ ಮಂಜರಿ' ಇವರಿಂದ ನಡೆಯಲಿದೆ.

ಫೆ.26ರಂದು ಬೆಳಗ್ಗೆ ಕವಾಟೋದ್ಘಾಟನೆ, ಗಣಪತಿ ಹವನ ಅಷ್ಟೋತ್ತರ ಶತಕಲಶ ಪ್ರತಿಷ್ಠೆ, ನವಕ ಪ್ರತಿಷ್ಠೆ ಬೆಳಗ್ಗೆ ಗಂಟೆ 11:00 ಕ್ಕೆ: ಶ್ರೀ ದೇವರ ಪ್ರತಿಷ್ಠೆ ಬೆಳಗ್ಗೆ ಗಂಟೆ 11:17ಕ್ಕೆ: ವೃಷಭ ಲಗ್ನದ ಶುಭಮುಹೂರ್ತದಲ್ಲಿ ಶ್ರೀ ದೇವರಿಗೆಕಲಶಾಭಿಷೇಕ ಂತ್ರಾವಾಹನೆ, ನವಕಾಭಿಷೇಕ, ಕಲಶಾಭಿಷೇಕ, ಮಹಾಪೂಜೆ, ನಿತ್ಯ ನೈಮಿತ್ತಿಕ ಪ್ರಾರ್ಥನೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ.

ಸಂಜೆ ಗಂಟೆ 5:00ರಿಂದ ಶ್ರೀ ಚೆನ್ನಕೇಶವ ದೇವಸ್ಥಾನದ ಮುಂಭಾಗದಿಂದ 'ಅದ್ಧೂರಿಯ ಭಜನಾ ಮೆರವಣಿಗೆ', 6:00ರಿಂದ ನಾಗಸನ್ನಿಧಿಯಲ್ಲಿ ಆಶ್ಲೇಷ ಬಲಿಪೂಜೆ, ತಾಯಂಬಕ, ದುರ್ಗಾಪೂಜೆ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ. 7.30ರಿಂದ ಜಿಲ್ಲೆಯ ಸುಪ್ರಸಿದ್ಧ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ 'ಯಕ್ಷ –ಗಾನ–ನಾಟ್ಯ ವೈಭವ ನಡೆಯಲಿದೆ.

ಫೆ. 27ರ ಬೆಳಗ್ಗೆ ಗಂಟೆ 8:00ರಿಂದ 48 ತೆಂಗಿನಕಾಯಿಯ ಗಣಪತಿ ಹವನ, ಚಂಡಿಕಾಯಾಗ, ಲಕ್ಷ ತುಳಸಿ ಅರ್ಚನೆ, ಮಹಾಪೂಜೆ, ಮಹಾ ಮಂತ್ರಾಕ್ಷತೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ. ಸಂಜೆ ಗಂಟೆ 6:00ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದ ಸಮಾರೋಪ ಸಮಾರಂಭ, ರಾತ್ರಿ ಗಂಟೆ 7:00 ರಿಂದ ಸಾಂಸ್ಕೃತಿಕ ಕಾರ್ಯಕ್ರಮ ಕೇರಳ ಮತ್ತು ಕರ್ನಾಟಕ ಸುಪ್ರಸಿದ್ಧ ಕಲಾವಿದರಿಂದ ಭಕ್ತಗಾನ ಸುಧೆ ಮತ್ತು ವಾದ್ಯಸಂಗೀತ ಜುಗಲ್ ಬಂಧಿ

ಶ್ರೀ ಹರಿಹರೇಶ್ವರ ದೇವಸ್ಥಾನ ಹರಿಹರ ಪಲ್ಲತ್ತಡ್ಕ

ಪ್ರತಿಷ್ಠಾ ವಾರ್ಷಿಕೋತ್ಸವ ಹಾಗೂ ಜಾತ್ರೋತ್ಸವ

ಫೆಬ್ರವರಿ 20 ರಿಂದ 22ರ ತನಕ

ಶುಭಕೋರುವ

ಶ್ರೀ ಹರಿಹರೇಶ್ವರ ದೇವಸ್ಥಾನ, ಹರಿಹರ ಪಲ್ಲತಡ್ಕ

ಅಂಚೆ : ಹರಿಹರಪಲ್ಲತಡ್ಕ – 574218, ಸುಳ್ಯ ತಾಲೂಕು, ದ.ಕ. ಮೊ:9448116685, 8073030594

ದಿನಾಂಕ 20-02-2024ನೇ ಮಂಗಳವಾರದಿಂದ ದಿನಾಂಕ 22-02-2024ನೇ ಗುರುವಾರದ ತನಕ ಬ್ರಹ್ಮಶ್ರೀ ನೀಲೇಶ್ವರ ಪದ್ಮನಾಭ ತಂತ್ರಿ ಉಜ್ಜಿಲ ಇವರ ನೇತೃತ್ವದಲ್ಲಿ ಶ್ರೀ ಹರಿಹರೇಶ್ವರ ದೇವರ

ಪ್ರತಿಷ್ಠಾ ವಾರ್ಷಿಕೋತ್ಸವ ಮತ್ತು ಜಾತ್ರೋತ್ಸವ

ಜರುಗಲಿರುವುದು. ಭಕ್ತ ಬಂಧುಗಳಾದ ತಾವೆಲ್ಲರೂ ಬಂದು ಭಾಗವಹಿಸಿ, ಶ್ರೀ ಹರಿಹರೇಶ್ವರ ದೇವರ ದಿವ್ಯಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ಶ್ರೀ ಶೇಷಪ್ಪ ಗೌಡ ಕಿರಿಭಾಗ
ಅಧ್ಯಕ್ಷರು
ಅಭಿವೃದ್ಧಿ ಸಮಿತಿ ಮತ್ತು ಸರ್ವ ಸದಸ್ಯರು

ಅರ್ಚಕರು
ಹಾಗೂ ಸಿಬ್ಬಂದಿ ವರ್ಗ

ಕಿಶೋರ್‌ಕುಮಾರ್ ಕೂಜುಗೋಡು
ಸಂಚಾಲಕರು,
ಅಧ್ಯಕ್ಷರು ವ್ಯವಸ್ಥಾಪನಾ ಸಮಿತಿ

ಸದಸ್ಯರುಗಳು : ಶ್ರೀ ಚಂದ್ರಹಾಸ ಎಸ್. ಶಿವಾಲ, ಶ್ರೀ ಶರತ್ ಡಿ. ಎಸ್. ಕಜ್ಜೋಡಿ, ಶ್ರೀ ಭವಾನಿಶಂಕರ ಪಿ. ಪೈಲಾಜೆ, ಶ್ರೀ ಆನಂದ ಕೆ. ಕೆರೆಕೋಡಿ, ಶ್ರೀ ಚಂದ್ರಶೇಖರ ಕೆ. ಕೆ. ಕಿರಿಭಾಗ, ಶ್ರೀಮತಿ ರೇಷ್ಮಾ ಕಟ್ಟೆಮನೆ ಶ್ರೀಮತಿ ಜ್ಯೋತಿ ಕೆ. ಎಲ್. ಕಳಿಗೆ ಅರ್ಚಕರು: ಶ್ರೀ ಸುಬ್ರಹ್ಮಣ್ಯ ನರಸಿಂಹ ಭಟ್ ಕೂಡುಕಟ್ಟಿನ ಹತ್ತು ಸಮಸ್ತರು

ಕಾರ್ಯಕ್ರಮಗಳು: ದಿನಾಂಕ 20-02-2024ನೇ ಮಂಗಳವಾರ ಬೆಳಿಗ್ಗೆ ಗಂಟೆ 9-00ರಿಂದ: ಹಸಿರು ಕಾಣಿಕೆ ಪ್ರಾರಂಭ, ಮಧ್ಯಾಹ್ನ ಗಂಟೆ 12-00ಕ್ಕೆ: ಮಹಾಪೂಜೆ, ಮಧ್ಯಾಹ್ನ ಗಂಟೆ 12-30ರಿಂದ: ಅನ್ನಸಂತರ್ಪಣೆ, ಸಾಯಂಕಾಲ: ತಂತ್ರಿಗಳ ಆಗಮನ, ರಾತ್ರಿ ಗಂಟೆ 8-00ಕ್ಕೆ: ಮಹಾಪೂಜೆ, ರಾತ್ರಿ ಗಂಟೆ 8-15ರಿಂದ: ಅನ್ನಸಂತರ್ಪಣೆ, ಸಾಂಸ್ಕೃತಿಕ ಕಾರ್ಯಕ್ರಮ: ಸಾ.ಗಂ 6-00ರಿಂದ ಅಂಗನವಾಡಿ ಮಕ್ಕಳಿಂದ "ನೃತ್ಯ ಕಾರ್ಯಕ್ರಮ", 7:00ರಿಂದ ಏಕಾದಶಿ ದೇವಿ ಮಹಾತ್ಮೆ (ಶ್ರೀ ಲಕ್ಷ್ಮಣ ಆಚಾರ್ಯ ಇವರ ಸಾರಥ್ಯದಲ್ಲಿ ಸ.ಕಿ.ಪ್ರಾ. ಶಾಲೆ ಕರಂಗಲ್ಲು ಇಲ್ಲಿನ ವಿದ್ಯಾರ್ಥಿಗಳಿಂದ), 8:00 ಸಭಾ ಕಾರ್ಯಕ್ರಮ, 9:00ರಿಂದ ಪ್ರಾಥಮಿಕ ಶಾಲಾ ಮಕ್ಕಳಿಂದ ವಿವಿಧ ವಿನೋದಾವಳಿಗಳು, 10ರಿಂದ: ಅಕ್ಷರಗಾನ ಸುಧೆ ತಂಡ ಕುಕ್ಕೆ ಸುಬ್ರಹ್ಮಣ್ಯ ಇವರಿಂದ ಸಂಗೀತ ರಸಮಂಜರಿ, 10:45ರಿಂದ: ನರಕಸುರ ವಧೆ – ಗರುಡ ಗರ್ವಭಂಗ ಯಕ್ಷಗಾನ ಗೊಂಬೆಯಾಟ (ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘ (ರಿ.) ಕಾಸರಗೋಡು ಇವರಿಂದ), 11-45ರಿಂದ ವಿವಿಧ ಸಂಘ ಸಂಸ್ಥೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ದಿನಾಂಕ 21-02-2024ನೇ ಬುಧವಾರ, ಬೆಳಿಗ್ಗೆ ಗಂಟೆ 6-00ರಿಂದ: ಗಣಪತಿ ಹವನ, ಕಲಶಪೂಜೆ, ಕಲಶಾಭಿಷೇಕ, ಮಧ್ಯಾಹ್ನ ಗಂಟೆ 12-00ಕ್ಕೆ: ಮಹಾಪೂಜೆ, ಅನ್ನಸಂತರ್ಪಣೆ, ಸಾಯಂಕಾಲ 6-00ಕ್ಕೆ: ದೀಪಾರಾಧನೆ, ಚೆಂಡೆವಾದನ, ರಾತ್ರಿ ಗಂಟೆ 8-00ಕ್ಕೆ: ಮಹಾಪೂಜೆ, ರಾತ್ರಿ ಗಂಟೆ 8-00ರಿಂದ: ದೇವರಬಲಿ ಉತ್ಸವ ಹೊರಡುವುದು, ವಸಂತಕಟ್ಟೆ ಪೂಜೆ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ ಸಾಯಂಕಾಲ ಗಂಟೆ 6-00ರಿಂದ 7-00ರ ತನಕ ಶ್ರೀ ಸತ್ಯನಾರಾಯಣ ಸತ್ಯಕಥೆ ರೂಪಕ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಸುಳ್ಯ ಇವರ ವತಿಯಿಂದ ಬೆಳಿಗ್ಗೆ 6.00 ರಿಂದ ಸಂಜೆ ಗಂಟೆ 6.00ರವರೆಗೆ ಅರ್ಧ ಏಕಾಹ ಭಜನೆ ಸಂಜೆ ಗಂಟೆ 6.00ರಿಂದ: ಬಾಲಚಂದ್ರ ಪೆರಾಜೆ ಇವರಿಂದ ಸ್ಯಾಕ್ಸೋಫೋನ್, ದಿನಾಂಕ 22-02-2024ನೇ ಗುರುವಾರ, ಬೆಳಿಗ್ಗೆ ಗಂಟೆ 6-00ರಿಂದ ಸಾಯಂಕಾಲ ತನಕ ಉಳ್ಳಾಗುಳು ಮತ್ತು ಪರಿವಾರ ದೈವಗಳ ನೇಮೋತ್ಸವ

ಡಾ। ಚಂದ್ರಶೇಖರ ಕಿರಿಭಾಗ
ಶ್ರೀಮತಿ ಹರ್ಷಮ್ಮ ಕಿರಿಭಾಗ
ಕೆ.ಸಿ ಹಿಮ್ಮತ್ (ಮಾಜಿ ಅಧ್ಯಕ್ಷರು ಗ್ರಾ.ಪಂ ಹರಿಹರಪಲ್ಲತ್ತಡ್ಕ)
ಶ್ರೀಮತಿ ಲತಾ ಹಿಮ್ಮತ್ ಮತ್ತು ಮನೆಯವರು

ಅಜಿತ್ ರಿಂಗ್ ವರ್ಕ್ಸ್
ಹರಿಹರ ಪಲ್ಲತಡ್ಕ
ಶಾಖೆಗಳು: ಸುಬ್ರಹ್ಮಣ್ಯ, ಗುತ್ತಿಗಾರು

ಮ್ಹಾ. ಸಜೀವ್ ಮೋ:9483808335, 8105800681

ಮಂಜುನಾಥಯ್ಯ
ಎಇಇ, 33ಕೆವಿ ಸ್ಟೇಷನ್ ಮೈಂಟೆನೆನ್ಸ್, ಮೆಸ್ಕಾಂ ಉಪವಿಭಾಗ, ಪುತ್ತೂರು
ದೇವರಗದ್ದೆ, ಹರಿಹರಪಲ್ಲತ್ತಡ್ಕ ಮತ್ತು ಮನೆಯವರು

ಅನ್ನಪೂರ್ಣ ಎಂಟರ್‌ಪ್ರೈಸಸ್
Annapoorna enterprises
Water Purifier
Sales, Service & Spares

G-18 Ground Floor, Millennium Towers,
Opp: Highland Hospital, Kankanady Mangalore
Mob : 7090662228 (sales)
7090662229 (service)
ಮಾ: ಪುನೀತ್ ಕುಮಾರ್ ಪೈಲಾಜೆ
ಮೊ: 7090662225

ಕಿಶೋರ್‌ಕುಮಾರ್ ಕೂಜುಗೋಡು
ಅಧ್ಯಕ್ಷರು ವ್ಯವಸ್ಥಾಪನಾ ಸಮಿತಿ
ಶ್ರೀ ಹರಿಹರೇಶ್ವರ ದೇವಸ್ಥಾನ,
ಹರಿಹರಪಲ್ಲತ್ತಡ್ಕ

ಶೇಷಪ್ಪ ಗೌಡ ಕಿರಿಭಾಗ
ಅಧ್ಯಕ್ಷರು,
ಅಭಿವೃದ್ಧಿ ಸಮಿತಿ,
ಶ್ರೀ ಹರಿಹರೇಶ್ವರ
ದೇವಸ್ಥಾನ ಹರಿಹರಪಲ್ಲತ್ತಡ್ಕ

ಮಧುಸೂದನ್ ಕಾಪಿಕಾಡ್
ವಕೀಲರು
ಜೆ.ಜೆ ಕಾಂಪ್ಲೆಕ್ಸ್ , ಗಾಂಧಿನಗರ, ಸುಳ್ಯ
ಮೊ: 9481769993

ಶ್ರೀ ವೆಂಕಟೇಶ್ವರ ಸಭಾಭವನ

ಹಾಲೆಮಜಲು, ಗುತ್ತಿಗಾರು
ಮಾ। ಯತೀಂದ್ರ ಹಾಲೆಮಜಲು ಮೊ: 9449489433

ಡಾ। ಕೆ.ಜಿ ಗಿರೀಶ್ ಉರಿಮಜಲು
ಉರಿಮಜಲು
ಸುಕೃತ ಕ್ಲಿನಿಕ್, ಹರಿಹರಪಲ್ಲತ್ತಡ್ಕ
ಮೊ: 9481389715

ಪ್ರಭಾಕರ ಕಿರಿಭಾಗ
ಅಧ್ಯಕ್ಷರು, ಆರ್ಥಿಕ ಸಮಿತಿ,
ಶ್ರೀ ಹರಿಹರೇಶ್ವರ ದೇವಸ್ಥಾನ
ಹರಿಹರಪಲ್ಲತ್ತಡ್ಕ
ಮತ್ತು ಮನೆಯವರು

ಕುಕ್ಕೆಶ್ರೀ ಟ್ರಾನ್ಸ್‌ಪೋರ್ಟ್ & ಅರ್ಥ್ ಮೂವರ್ಸ್

ಹರಿಹರ ಪಲ್ಲತ್ತಡ್ಕ
ಮಾ: ಉಲ್ಲಾಸ್ ಮಲ್ಲಾರ ಮತ್ತು ಮಕ್ಕಳು
ಮೊ: 9480984242

ಸಂತೋಷ್ ನಾಯ್ಕ ಗಡಿಕಲ್ಲು
ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್
ಗ್ರಾ. ಪಂ. ಕೊಲ್ಲಮೊಗ್ರ
ಮೊ: 9481387734

ಚಂದ್ರಶೇಖರ ಕೆ.ಕೆ.
ಕಿರಿಭಾಗ
ಸದಸ್ಯರು, ವ್ಯವಸ್ಥಾಪನಾ ಸಮಿತಿ
ಶ್ರೀ ಹರಿಹರೇಶ್ವರ ದೇವಸ್ಥಾನ, ಹರಿಹರಪಲ್ಲತ್ತಡ್ಕ



ನಿತಿನ್ ಬಾಳುಗೋಡು
ಜನಸು ವ್ಯಾಪಾರಸ್ಥರು
ಬಾಳುಗೋಡು
ಮೊ: 9481387694

ಶ್ರೀಮತಿ ಮತ್ತು ಶ್ರೀ ಬಾಲಸುಬ್ರಹ್ಮಣ್ಯ
ಮರದ ಪೀಠೋಪಕರಣ ತಯಾರಕರು.
ಹರಿಹರ ಪಲ್ಲತ್ತಡ್ಕ
ಮೊ: 9481229355

ಆರ್.ಆರ್ ಶಾಮಿಯಾನ

ಹರಿಹರ ಪಲ್ಲತ್ತಡ್ಕ
ಮಾ: ರೇಗನ್ ಶೆಟ್ಟಿಯಡ್ಕ
ಮೊ: 9480527793

ಶ್ರೀಮತಿ ರೇಷ್ಮಾ ಪ್ರಕಾಶ್ ಕಟ್ಟೆಮನೆ
ಸದಸ್ಯರು, ವ್ಯವಸ್ಥಾಪನಾ ಸಮಿತಿ
ಶ್ರೀ ಹರಿಹರೇಶ್ವರ ದೇವಸ್ಥಾನ ಹರಿಹರಪಲ್ಲತ್ತಡ್ಕ



ಜನಾರ್ಧನ ಗುಂಡಿಹಿತ್ಲು
ಕಾರ್ಯದರ್ಶಿ, ಅಭಿವೃದ್ಧಿ ಸಮಿತಿ
ಶ್ರೀ ಹರಿಹರೇಶ್ವರ ದೇವಸ್ಥಾನ ಹರಿಹರಪಲ್ಲತ್ತಡ್ಕ
ಮೊ: 9449387227

ಶ್ರೀಮತಿ ಹೊನ್ನಮ್ಮ
ಸಾರಕೂಟೇಲು ತರವಾಡುಮನೆ ಬೆಂಡೋಡಿ
ಬೇಬಿ. ತ್ರಿಶಿಕ ದೋಳ್ತಿಲ - ಬೇಬಿ. ಅಶಿಕ ದೋಳ್ತಿಲ
ಶ್ರೀಮತಿ ಚಂದ್ರಾವತಿ ದಯಾನಂದ ಗೌಡ ದೋಳ್ತಿಲ

ಪವನ್ ಜಿ.
ಶ್ರಿ ಲಕ್ಷ್ಮೀ ಸೈಬರ್ ಮತ್ತು ಗ್ರಾಮ -1 ಸೆಂಟರ್
ಖಂಡಿಗೆ ಕಾಂಪ್ಲೆಕ್ಸ್ , ಹರಿಹರಪಲ್ಲತ್ತಡ್ಕ
ಮೊ: 9482183608

ಶ್ರೀ ಹರಿಹರೇಶ್ವರ ಎಲೆಕ್ಟ್ರಾನಿಕ್ಸ್

ವಿರಾಮಿಸು ಕಾಂಪ್ಲೆಕ್ಸ್ ಹರಿಹರ ಪಲ್ಲತ್ತಡ್ಕ
ದೀಕ್ಷಿತ್ ಎನ್.ವಿ
ಮೊ: 9448250266

ಶ್ರೀದೇವಿ ಅಲ್ಯೂಮಿನಿಯಂ ಫ್ಯಾಬ್ರಿಕೇಶನ್

ಎಸ್.ವಿ ಕಾಂಪ್ಲೆಕ್ಸ್, ಹರಿಹರಪಲ್ಲತ್ತಡ್ಕ
ಮೊ: 9741044352
8762783443
ಮಾ। ಯತೀಶ್‌ಕುಮಾರ್

ಹೋಟೆಲ್ ಚಾಮುಂಡೇಶ್ವರಿ

ಶ್ರೀ ಹರಿ ಕಾಂಪ್ಲೆಕ್ಸ್, ಹರಿಹರಪಲ್ಲತ್ತಡ್ಕ
(ನಮ್ಮಲ್ಲಿ ಕ್ಯಾಟರಿಂಗ್ ವ್ಯವಸ್ಥೆ ಇದೆ)
ಮಾ। ರಾಜೇಶ್ ಪರಮಲೆ ಮೊ: 8618018629

ಶ್ರೀಮತಿ ಸುನಂತಿ & ಶ್ರೀ ದೇವದಾಸ್
ಕಜೆಗದ್ದೆ, ಹಿರಿಯಡ್ಕ
ಮತ್ತು ಮಕ್ಕಳು ಬಾಳುಗೋಡು
ನಿವೃತ್ತ ಡಿವಿಜನಲ್ ಇಂಜಿನಿಯರ್
ಬಿಎಸ್‌ಎನ್‌ಎಲ್

ಶ್ರೀಮತಿ ಮತ್ತು ಶ್ರೀ ಲಕ್ಷ್ಮಣ ಕಳಿಗೆ
ಮತ್ತು ಮಕ್ಕಳು, ಹರಿಹರಪಲ್ಲತ್ತಡ್ಕ
ಮೊ: 9481386038

Printed, Published & Edited by Muralidhara A, Owned by Muralidhara A, Addanapare House, P.O & Villege Guthigar, Sullia Taluk D.K , Published from 2nd Floor, Vinayaka Complex, Carstreet Sullia, D.K 574239 & Printed at Digantha Mudrana Ltd, Manglore D.K.